ನವರನ್ನೂ ಮತ್ತು ಬೊಂಬಾಯಿ ಏರಿಯಾದ ಬಾರ್ ಅಸೋಸಿಯೇಷನ್ ಸದಸ್ಯರನ್ನೂ ಕನ್‌ಸರ್ಟ್ ಮಾಡಿದ್ದೇವೆ ಎಂದು ಹೇಳಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಇವರು ಈ ವಿಚಾರದಲ್ಲಿ ಹೈಕೋರ್ಟ್ ನವರನ್ನು ಕನ್‌ಸರ್ಟ್ ಮಾಡಿದ್ದೇವೆ ಎಂದು ಇದರಲ್ಲಿ ಬರೆಯಬಾರದಾಗಿತ್ತು. ಏತಕ್ಕೆಂದರೆ ನಾಳೆ ಯಾರಾದರೂ ಒಬ್ಬರು ಹೈಕೋರ್ಟಿಗೆ ರಿಟ್ ಕಾಕಿದರೆ it leads to so many complications. Are you not putting the High Court in an embarrassing position? ನೀವು ಇದರ ಬಗ್ಗೆ ಯಾವ ಪ್ರಾವಿಷನ್ ಪ್ರಕಾರ ಹೈಕೋರ್ಟಿನವರನ್ನು ಕನ್‌ಸರ್ಟ್ ಮಾಡಿದ್ದೀರಿ? ನಿಜವಾಗಿಯೂ ಇದು ನಾಚಿಕೆಗೇಡು. It will lead to so many complications. Tomorrow a person may go and challenge and say that the legislature had no power to validate ಎಂದರೆ you are putting the High Court in an embarrassing position. ಈ ಒಂದು ಬಿಲ್ಲನ್ನು ತರಬೇಕಾದರೆ ನಿಮ್ಮ ಬ್ರುಲಿಯೆಂಟ್ ಅಡ್ವೋಕೇಟ್ ಜನರಲ್ ಅವರನ್ನು ಏತಕ್ಕೆ ಕೇಳಬಾರದಾಗಿತ್ತು? ಇಪ್ಪತ್ತಿನ ದಿವಸ ಜುಡಿಷಿಯರ್ ಪ್ರೊನೌನ್ಸ್‌ಮೆಂಟನ್ನು ಎಕ್ಸ್‌ಪೋಜ್ ಮಾಡಿದ್ದೀರಿ. ಬಾರ್ ಅಸೋಸಿಯೇಷನ್‌ನವರ ಪ್ರೊನೌನ್ಸ್‌ಮೆಂಟನ್ನು ಎಕ್ಸ್‌ಪೋಜ್ ಮಾಡಿದ್ದೀರಿ "as the civil judges had no jurisdiction to deal with land acquisition cases during the period, the High Court of Mysore and the members of the Bar in the Bombay area have suggested that the proceedings taken by the civil Judges may be validated" ಎಂದು ಹೇಳಿದ್ದಾರೆ. ನಿಜವಾಗಿಯೂ ಇದರಿಂದ ರೆಜಿಸ್ಟ್ರೇಡರ್ ಮರ್ಯಾದೆ ಹೋಗುತ್ತದೆ ಎಂದು ನನ್ನ ಭಾವನೆ. It is purely latches on the part of the Government. ಇದು ಸರಿಯಲ್ಲ. ಎಲ್ಲರ ಮರ್ಯಾದೆಯೂ ಉಳಿಯಬೇಕಾಗಿದ್ದರೆ ಒಂದು ಅಮೆಂಡ್‌ಮೆಂಟ್ ಬಿಲ್ ತರಬಹುದು. The appellate authority at least could have stated, here is a case where the Civil Judge has entertained the case without jurisdiction. So, we send the paper for presenting them to the proper court ಎಂದು ಹೇಳಬಹುದಾಗಿತ್ತು. ಆದರೆ ಆ ರೀತಿ ಮಾಡಲಲ್ಲ. ಈಗ through the civil judges were not empowered specifically to deal with land acquisition cases. The proceedings have gone on. ಈಗ ಅದನ್ನು ರೆಟ್ರಾಸ್ಪೆಕ್ಟೀವ್ ಎಫೆಕ್ಟಿಗೆ ಕೊಟ್ಟು for all the acts done by them may be validated ಎಂದು ಹೇಳಿದ್ದಾರೆ. ಇದು ನಮಗೆ ಮರ್ಯಾದೆ ತರುವುದಿಲ್ಲ. ಇದನ್ನು ವಾಪಸ್ಸು ತೆಗೆದು ಕೊಂಡು ಬೇರೆ ತರಹ ವ್ಯಾಲಿಡೇಷನ್ ಕೊಡುವ ರೀತಿ ಮಾತಿ. ಇಲ್ಲದಿದ್ದರೆ it leads to so many complications. Tomorrow a person may go and challenge and say that the legislature had no power to validate ಎಂದರೆ ಅದು ನಿಜವಾಗಿಯೂ ಅದು ಬಹಳ ಕೆಟ್ಟದ್ದು ಎನಿಸುತ್ತದೆ. ಆದ್ದರಿಂದ ಈ ಬಗ್ಗೆ ಯಾರಾದರೂ ಕಾನೂನು ಪರಿಣತರನ್ನ ಕನ್‌ಸರ್ಟ್‌ಮಾಡಿ ಒಂದು ಅಮೆಂಡ್‌ಮೆಂಟ್ ತಂದಿದ್ದರೆ ಚೆನ್ನಾಗಿತ್ತು. ಬೇರೆಯವರು ನಗುವ ರೀತಿ ಮಾಡಬೇಡಿ ಎಂದು ಮಾನ್ಯ ಮಂತ್ರಿಗಳಿಗೆ ಸೂಚಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† Sri K. H. RANGANATH (Mudigere).—I rise to oppose the Bill. I do not know whether the hon. Minister for Law has bestowed his attention to this Bill because I see under the Statement of Objects and Reasons, the name of Sri S. R. Kanti, the former Minister for Law. I am sure if the hon. Minister had seen this Bill, he would not have introduced this Bill for the consideration of this House. This Bill seeks to validate judgements which are *ab initio* void. This House is supreme to do anything, except making a man a woman and a woman a man. Still we would be within our limits to pass this Bill. I think the hon. Minister would consider the expressions and views of the hon. members who have spoken earlier and would take back the Bill. In fact if he has no intention to take back the Bill, as suggested by the hon. Member Sri M. Nagappa he can bring an amendment to the Act itself. In fact it is a very serious omission on the part of those District

(SRI K. H. RANGANATH)

Judges who transferred the cases to the Civil Judges. It would only speak of the callousness. These are fit cases in which those judges are to be dealt with. They knew full well that they had no jurisdiction to try those cases. The District Judges should not have transferred the cases to the Civil Judges. In fact it is stated by some of the hon. members that objection was taken for entertaining the cases when proceedings were going on. I do not know how the court did not take into consideration the objection questioning the very jurisdiction of the court. If such things are overlooked, it will be really very sorry state of affairs.

5-00 P.M.

The Hon. Minister for Law is an experienced lawyer who has got some liking for Judiciary. As opined by my friend Sri Halappa, I am also of the firm view that this particular sentence "the High Court of Mysore and the members of the Bar in the Bombay Area have suggested" should not have found a place in the Statement of Objects and Reasons. When the whole Act is questioned in the High Court, sometimes all these things will be brought to the notice of the High Court. I feel sorry for having brought in the name of the High Court here. The Hon. Minister for Parliamentary Affairs has still got time to think over this aspect. If he wants he may even withdraw this Bill. He may bring an amendment to the Civil Court Act itself instead of trying to validate the judgements in some cases. It is also a matter for serious consideration as to how the District Judges, knowing fully well that the Civil Judges had no jurisdiction to deal certain cases, transferred and how the Civil Judges also knowing that they had no jurisdiction, disposed them of. There is serious commission and omission on the part of both. The Minister for Parliamentary Affairs may also realise that this validation will touch the State Exchequer because it means payment of compensation under the Land Acquisition Act. Let us not do what the intelligentsia in the State and this country feels that we have done what should not be done. With this intention, I request the Hon. Minister to withdraw this Bill and bring within two or three days an amendment to the original Act, giving retrospective effect.

†ಶ್ರೀ ಎಸ್. ಬಂಗಾರಪ್ಪ (ಸೊರಬ).—ಅಧ್ಯಕ್ಷರೇ, ಈಗಾಗಲೇ ಈ ಸದನದ ಮುಂದೆ ಮುಂಡಿಸಿರುವ Mysore Courts of Civil Judge (Validation of Proceedings) Bill, 1967 ರ ಬಗ್ಗೆ ತಂದಿರುವ ಈ ವ್ಯಾಲಿಡೇಷನ್ ಆಫ್ ಪ್ರೊಸೀಡಿಂಗ್ಸ್ ಬಗ್ಗೆ ಮಾನ್ಯ ಸದಸ್ಯರುಗಳ ನೇಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಆ ವಿಚಾರಗಳನ್ನೇ ಮತ್ತೆ ನಾನು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಇದುವರೆಗೆ ಶ್ರೀ ರಂಗನಾಥ ಅವರು ಕೆಲವು ವಿಚಾರಗಳನ್ನು ಹೇಳಿದರು. Statement of Objects and Reasons ನಲ್ಲಿ High Court of Mysore and the Members of the Bar in the Bombay area — ಅವರು 80 ಕೇಸ್‌ಗಳ ಬಗ್ಗೆ ಮಾಡಿರುವ ಜೆಡ್ಜ್‌ಮೆಂಟ್‌ಗಳನ್ನು ವ್ಯಾಲಿಡೇಟ್ ಮಾಡಬಹುದೆಂದು ಸಜೆಸ್ಟ್ ಮಾಡಿವ್ಯಾರೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇದನ್ನು ಬೇರೆ ಅರ್ಥದಲ್ಲಿ ಹೇಳುವುದಾದರೆ ರಾ-ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟ ಮಂತ್ರಿಗಳು ಮತ್ತು ಈ ಅಮೆಂಡ್‌ಮೆಂಟ್ ಬರ್ ತರತಕ್ಕಂಥ ಸಂಬಂಧಪಟ್ಟ ಜನ ಯಾವ ಯಾವ ಇಲಾಖೆಗಳಲ್ಲಿ ಇದ್ದಾರೆ ಅವರುಗಳು ಮಾಡತಕ್ಕಂಥ ತಪ್ಪನ್ನು ಮುಚ್ಚಿಕೊಂಡು

ಹೋಗುವುದಕ್ಕೆ ಇದರಲ್ಲಿ High Court of Mysore and the Members of the Bar in the Bombay Area -- ಎಂಬುದನ್ನು ಸೇರಿಸಿವ್ವಾರೆಂದು ನನ್ನ ಅಭಿಪ್ರಾಯವಾಗಿದೆ. ಹೈಕೋರ್ಟಿನವರು ಮತ್ತು ಬೊಂಬಾಯಿಕರ್ನಾಟಕದ ಬಾರ್ ಅಸೋಷಿಯೇಷನ್‌ನವರು ಹೇಳಿರುವುದರಿಂದ ಈ 80 ಕೇಸ್‌ಗಳ ಬಗ್ಗೆ ಮಾತ್ರ ಅಗಿರತಕ್ಕಂಥ ಕಾನೂನುಬಾಹಿರವಾದ ಜಡ್ಜ್‌ಮೆಂಟನ್ನು ವ್ಯಾಲಿಡೇಟ್ ಮಾಡುವುದಕ್ಕೆ ಹೊರಟಿದ್ದಾರೆಂದು ಸ್ಪಷ್ಟವಾಗಿ ಗೊತ್ತಾಗುತ್ತಿದೆ. ಅಮೆಂಡ್‌ಮೆಂಟ್ ಬಿಲ್ಲನ್ನು ಯಾವ ರೀತಿ ತರಬೇಕು ಎಂಬ ಪ್ರಶ್ನೆ ನಮ್ಮ ಮುಂದೆ ಬರುತ್ತದೆ. ಈ ಬಗ್ಗೆ ಲಾ-ಡಿಪಾರ್ಟ್‌ಮೆಂಟ್‌ನವರು ಯೋಚನೆ ಮಾಡಬೇಕು. ಒರಿಜನಲ್ ಆಕ್ಟ್‌ಗೆ ತಿದ್ದುಪಡಿಯನ್ನು ತರುವುದಾದರೆ ಅದರಿಂದ ಸಾರ್ವಜನಿಕರಿಗೆ ಮುಂದೆ ಯಾವ ರೀತಿಯಿಂದಲೂ ಅನಾಹುತವಾಗಲೀ ತೊಂದರೆಯಾಗಲೀ ಬರದಂತೆ ತಿದ್ದುಪಡಿಯನ್ನು ತರಬೇಕು. ಆ ರೀತಿ ಸಾರ್ವಜನಿಕರಿಗೆ ಅನುಕೂಲವಾಗುವಂತಹ ತಿದ್ದುಪಡಿಯನ್ನು ತಂದರೆ ಅದು ತಿದ್ದುಪಡಿ ಎಂದು ಅನ್ನಿಸಿಕೊಳ್ಳುವುದು ಮಾತ್ರವಲ್ಲ ಅದಕ್ಕೆ ನಾವೂ ಸಹ ಬೆಲೆ ಕೊಡಬಹುದು. ಈಗ ತಂದಿರತಕ್ಕಂಥ ವ್ಯಾಲಿಡೇಷನ್ ಆಫ್ ಪ್ರೊಸೀಡಿಂಗ್ಸ್‌ನ್ನು ನಾನು ಪೂರ್ತಿಯಾಗಿ ಓದಿದೆ. ಅದನ್ನು ಕೇವಲ 80 ಕೇಸುಸ್‌ಗಳ ಬಗ್ಗೆ ತಂದು ಕಾಲ ಕಳೆಯುತ್ತಿದ್ದೇವೆ. ಜಡ್ಜ್ ಮಾಡಿರತಕ್ಕಂಥ ತಪ್ಪನ್ನು ಮುಚ್ಚಲು ನಾವು ಇಲ್ಲಿ ಕುಳಿತಿದ್ದೇವೆ. ಇದ. ನಮ್ಮ ವ್ಯಾಪ್ತಿಗೆ ಬೀರಿದ ಕೆಲಸವಾಗಿದೆ. ಗಂಡಸನ್ನು ಹೆಂಗಸನ್ನಾಗಿ, ಹೆಂಗಸನ್ನು ಗಂಡಸನ್ನಾಗಿ ಮಾಡುವ ಹಕ್ಕು ನಮ್ಮ ಸ್ನೇಹಿತರಾದ ಶ್ರೀಮಾನ್ ರಂಗನಾಥ್ ಅವರು ಹೇಳಿದಂತೆ ನಮಗೆ ಇದೆ ಎಂದುಕೊಂಡರೂ ಬೇರೆಯವರು ಮಾಡಿರತಕ್ಕಂಥ ತಪ್ಪನ್ನು ಮುಚ್ಚುವುದಕ್ಕೆ ಈ ಸದನಕ್ಕೆ ಹಕ್ಕು ಇದೆ ಎಂದು ಹೇಳುವುದಾದರೆ ಅದು ಒಳ್ಳೆಯದಲ್ಲ. ಪ್ರಜಾ ನತ್ತೆಯಲ್ಲಿ ಈ ರೀತಿ ಮಾಡತಕ್ಕದ್ದು ಸರಿಯಲ್ಲ ಎಂಬುದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಮತ್ತೊಮ್ಮೆ ಲಾ-ಡಿಪಾರ್ಟ್‌ಮೆಂಟ್‌ನೊಡನೆ ವಿಚಾರ ಮಾಡುವುದು ಒಳ್ಳೆಯದೆಂದು ಕಾಣುತ್ತದೆ. ಹೈಕೋರ್ಟಿನವರು ಮತ್ತು ಬೊಂಬಾಯಿ ಏರಿಯಾದ ಬಾರ್ ಅಸೋಷಿಯೇಷನ್ ಅವರು ಹೇಳಿದ್ದಾರೆಂದು ನೀವು ಹೇಳಬಹುದು. ನೀವೇ ಅವರನ್ನು ಕೇಳಿದ್ದಿರಾ ಅಥವಾ ಅವರೇ ನಮಗೆ ಕೊಟ್ಟಿದ್ದಾರಾ ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ನಾಗಪ್ಪ.—ಮೈಸೂರಿನ ಹೈಕೋರ್ಟಿನವರು ಒಪೀನಿಯನ್ ಕೊಟ್ಟಿದ್ದಾರೆಂದು ಇದರಲ್ಲಿ ಹೇಳಲಾಗಿದೆ. ಅವರು ಏನು ಒಪೀನಿಯನ್ ಕೊಟ್ಟಿದ್ದಾರೆ ಎಂಬುದನ್ನು ಸಭೆಯ ಮುಂದೆ ಇಟ್ಟರೆ ಯಾವ ಪ್ರಾವಿಜನ್ ಪ್ರಕಾರ ಅವರು ಒಪೀನಿಯನ್ ಕೊಟ್ಟಿದ್ದಾರೆ ಎಂಬುದನ್ನು ಮಾನ್ಯ ಸದಸ್ಯರುಗಳು ತಿಳಿದುಕೊಳ್ಳುವುದಕ್ಕೆ ಒಳ್ಳೆಯದಾಗುತ್ತದೆಂದು ನಾನು ಹೇಳುತ್ತೇನೆ.

Sri D. B. KALMANKAR.—If it is placed on the Table, we can comment. If it is not placed, to that extent, our discussion will have no validity. If it is placed, some new points may come up. We may just examine how for the High Court was competant to suggest to the Government for seeing that the proceedings taken by the Civil Judges are validated. Then we will be doing full justice to the Bill also.

ಶ್ರೀ ಎಸ್. ಬಂಗಾರಪ್ಪ.—ಈಗ ಮಾನ್ಯ ಸದಸ್ಯರಾದ ಶ್ರೀ ನಾಗಪ್ಪನವರು ತಿಳಿಸಿದ್ದಾರೆ, ಹೈಕೋರ್ಟಿನವರು ಮತ್ತು ಬೊಂಬಾಯಿ ಏರಿಯಾದ ಬಾರ್ ಅಸೋಸಿಯೇಷನ್ ಅವರು ತಮಗೆ ನೀಡಿರುವ ಸಲಹೆಗಳನ್ನು ಈ ಸಭೆಯ ಮುಂದೆ ಇಟ್ಟರೆ ನಾವುಗಳು ಅದನ್ನು ನೋಡಿ ಯೋಚನೆ ಮಾಡುವುದಕ್ಕೆ ಅನುಕೂಲವಾಗುತ್ತದೆಂದು. ಅವರು ಹೇಳಿರುವ ಸಲಹೆಗಳು ಒಳ್ಳೆಯದು ಇತ್ತು ಎಂದು ನಮಗೆ ತಿಳಿದುಬಂದರೆ ಇದಕ್ಕೆ ನಾವು ಒಪ್ಪಿಗೆ ಕೊಡೋಣ. ಈಗ ಅವರುಗಳು ಯಾವ ಪ್ರಾವಿಷನ್ ಪ್ರಕಾರ ಸರ್ಕಾರಕ್ಕೆ ಸಲಹೆ ಕೊಟ್ಟಿದ್ದಾರೆ ಎಂಬ ಪ್ರಶ್ನೆ ಬರುತ್ತದೆ. ಎರಡನೆಯದಾಗಿ ಇದರಲ್ಲಿ ಕಾನೂನು ಪ್ರಶ್ನೆ ಅಡಕವಾಗಿದೆ. ರಾಜ್ಯಸರ್ಕಾರದ್ದು ಸಹ ಮೂಲಭೂತವಾದ ತಪ್ಪು ಇದೆ. ಇವತ್ತಿನದಿವಸ ಅಡ್ವೋಕೇಟ್ ಜನರಲ್‌ನವರನ್ನು ಮತ್ತು ಅವರ ಸಹಾಯಕ್ಕಾಗಿ ಬೇಕಾದಷ್ಟು ಸಿಬ್ಬಂದಿಗಳನ್ನು ಕೊಟ್ಟು ನೇಮಕಮಾಡಿದ್ದೇವೆ. ಇಂತಹ ವಿಷಯದಲ್ಲಿ ಅಡ್ವೋಕೇಟ್ ಜನರಲ್ ಅವರ ಅಭಿಪ್ರಾಯ ಪಡೆಯುವುದಕ್ಕೆ ಅವಕಾಶವಿದೆ. ಆದ್ದರಿಂದ ಅವರನ್ನು ಇಲ್ಲಿಗೆ ಕರೆಸುವುದು ಒಳ್ಳೆಯದು. ಈ ವಿಚಾರದಲ್ಲಿ ಸರ್ಕಾರದವರು ಅಡ್ವೋಕೇಟ್ ಜನರಲ್ ಅವರ ಸಲಹೆಗಳನ್ನು ಕೇಳದೆ ಅವರ ಕೈಬಿಟ್ಟು ಕಾನೂನು ಮಾಡಿದರೆ ಅದು ದೇಶಕ್ಕೆ ಮರ್ಯಾದೆಯನ್ನು ತರುವ ಕಾನೂನಾಗುವುದಿಲ್ಲ.

ಮಾನ್ಯ ಸದಸ್ಯರಾದ ಶ್ರೀ ನಾಗಪ್ಪನವರು ಹೇಳಿದ ಹಾಗೆ ಇದಕ್ಕಾಗಿ ಇಲ್ಲಿ ಒಂದು ಅಮೆಂಡು ಮೆಂಟು ಬಿಲ್ ಎಂದು ತಂದು ಮಾಡುವುದು ಸರಿಯಲ್ಲ, ಈ ರೀತಿ ಅಮೆಂಡ್‌ಮೆಂಟ್ ಬಿಲ್ ತರುವು

(ಶ್ರೀ ಎಸ್. ಬಂಗಾರಪ್ಪ)

ದಕ್ಕೆ ಬದಲಾಗಿ ಲಿಜಿನರ್ ಆಕ್ಟ್ ಏನಿದೆಯೋ ಅದಕ್ಕೆ ತಿದ್ದುಪಡಿ ತರುವುದು ಒಳ್ಳೆಯದೆಂದು ಈ 80 ಕೇಸುಗಳು ಆ ನಂತರವೇ ಇನ್ನೂ ಎಂಟುಸಾವಿರ ಕೇಸುಗಳು ಬರಬಹುದು. ಅವೆಲ್ಲಕ್ಕೂ ಅನುಕೂಲ ವಾಗುವಂತೆ ಒಂದು ಅಮೆಂಡ್‌ಮೆಂಟ್ ಬಿಲ್ ತಂದರೆ ಸರಿಹೋಗುತ್ತದೆ. ಇಪ್ಪತ್ತು ನಮ್ಮ ಶರಾವತಿ ಪ್ರದೇಶದಲ್ಲಿ ಇಂತಹ ಬಡ ಜನರ ಕೇಸುಗಳು ಬೇಕಾದಷ್ಟು ಇವೆ. ಇದರ ಬಗ್ಗೆ ಸರಿಯಾಗಿ ವಿಚಾರ ಮಾಡಬೇಕು. ಮತ್ತು ನಾವು ಇಲ್ಲಿ ಮಾಡುವ ಕಾನೂನುಗಳು ಕಾನೂನು ಬಾಹಿರವಾಗಿವೆ ಎಂದು ಹೈ ಕೋರ್ಟಿನಲ್ಲಿ ಬೇಕಾದಷ್ಟು ಟೀಕೆಗಳು ಬರುತ್ತಿವೆ. ಇಂದು ಬಂದಿರುವ ಹೈ ಕೋರ್ಟು ಜಡ್ಜ್‌ಮೆಂಟುಗಳನ್ನು ನೋಡಿದರೆ ನಮ್ಮ ಸರಕಾರದವ್ವರುವ ಲಾ ಡಿಪಾರ್ಟು ಮೆಂಟಿನವ್ವರುವ ವ್ಯಕ್ತಿಗಳು ತಮಗೆ ಬೇಕಾದವರಿಗೆ ಸಹಾಯ ಮಾಡುವುದಕ್ಕೋಸ್ಕರ ಕೆಲಸ ಮಾಡುತ್ತಿದೆ ಎಂದು ಹೇಳಿರುವುದನ್ನು ನಾವು ನೋಡಬಹುದು. ಮೊನ್ನೆ ಮೊನ್ನೆ ನಮ್ಮ ಹೈಕೋರ್ಟು ಜಡ್ಜರಾಗಿರುವ ಶ್ರೀ ಭೀಮಯ್ಯನವರು ಟ್ರಸ್ಟ್ ಬೋರ್ಡು ಕೇಸಿನಲ್ಲಿ ತೀರ್ಮಾನ ಕೊಡುತ್ತಾ ಲಾ ಡಿಪಾರ್ಟುಮೆಂಟಿನ ಮೇಲೆ ಸಿಕ್ಕಾಪಟ್ಟೆ ಕ್ರಿಟಿಸೈಸ್ ಮಾಡಿರುವುದನ್ನು ಮತ್ತು ಇಲ್ಲಿ ನಡೆಯುತ್ತಿರುವ ಅನ್ಯಾಯಗಳನ್ನು ಅವರ ಜಡ್ಜ್‌ಮೆಂಟಿನಲ್ಲಿ ಬರೆದಿರುವುದನ್ನು ನೋಡಬಹುದು. ಲಾ ಡಿಪಾರ್ಟುಮೆಂಟಿನವರು ಕೊನೆಯ ಪಕ್ಷ ಜಿಪಾರ್ಯಿಂದಲಾದರೂ ಅಡ್ವೊಕೇಟು ಜನರಲ್‌ರವರನ್ನು ನಲಹೆಯನ್ನು ಏಕೆ ಕೇಳಬಾರದಾಗಿತ್ತು ? ಆ ರೀತಿ ಕೇಳದೆ, ನಾವೇ ಸೋಲ್ ಮಾನಾರ್ಕ್ಸ್ ಎನ್ನುವ ತೀರ್ಮಾನಕ್ಕೆ ಬರುವುದು ಸರಿಯಲ್ಲ. ಸ್ಟೇಟ್‌ಮೆಂಟ್ ಆಫ್ ಆಬ್‌ಜಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿ ಇವರೊಡನೆ ಕರೆತಂದು ಮಾಡಿದ್ದೇವೆ ಎಂದರೆ ಲಾ ಡಿಪಾರ್ಟುಮೆಂಟ್ ಇರುವುದಾದರೂ ಏತಕ್ಕೆ ಎಂದು ಕೇಳಬೇಕಾಗಿದೆ. ಇಂತಹ ಡಿಪಾರ್ಟುಮೆಂಟಿನಿಂದ ರಾಜ್ಯ ಸರಕಾರಕ್ಕೆ ಯಾವ ಮರ್ಯಾದೆಯೂ ಬರುವುದಿಲ್ಲ. ಶ್ರೀ ನಾಗಪ್ಪನವರು ಹೇಳಿದ ಹಾಗೆ ಒಂದು ಅಮೆಂಡುಮೆಂಟು ಬಿಲ್ ನಾಳೆ ತರಬಹುದು. ನಾಳೆ ನಾನೂ ಕೂಡ ಇಂತಹ ಒಂದು ಬಿಲ್ಲನ್ನು ತರಬಹುದು. ಹೀಗೆ ಮಾಡಿದರೆ ಗತಿಯೇನು ? ಇಲ್ಲಿ 80 ಕೇಸುಗಳಿಗೆ ಏತಕ್ಕೆ ಇಷ್ಟು ಸ್ಪೆಷರ್ ಪ್ರಿಫರೆನ್ಸ್ ಕೊಡಬೇಕು ? ಇದರ ಬಗ್ಗೆ ಮಾನ್ಯ ಪಾರ್ಲಮೆಂಟರಿ ಮಂತ್ರಿಗಳು ವಿಚಾರ ಮಾಡಬೆ ಇಂತಹ ಬಿಲ್ಲನ್ನು ತರಲು ಏಕೆ ಪ್ರಯತ್ನ ಪಟ್ಟರು ಎಂದು ಇವರನ್ನು ಪ್ರಶ್ನೆ ಮಾಡಬೇಕಾಗಿದೆ. ಈ ರೀತಿ ಮಾಡುವುದನ್ನು ಕಡಿಮೆ ಮಾಡಬೇಕು ಎನ್ನುವ ದೃಷ್ಟಿಯಿಂದ ಇಲ್ಲಿ ಹೇಳುತ್ತಿದ್ದೇನೆ. ಹೀಗೆ ತಂದು ಇದನ್ನು ರಿಟ್ರಾಸ್ಪೆಕ್ಟೀವ್ ಆಗಿ ಮಾಡಬೇಕು ಎಂದು ಮಾಡಬಾರದು ಮತ್ತು ಇದಕ್ಕಾಗಿ ಈ ಸಭೆಯ ಕಾಲವನ್ನು ವ್ಯಯ ಮಾಡುವುದು ನ್ಯಾಯವೂ ಅಲ್ಲ. ಈ ರೀತಿ ಮಾಡಬಾರದು.

Sri B. B. SAYANAK (Belgaum City).—Mr. Deputy Speaker, Sir, I rise to oppose the Mysore Courts of Civil Judge (Validation of Proceedings) Bill, 1967. It is stated in the Statement of Objects and Reasons :

> " These courts were empowered under the amended Act with effect from 15th February 1966. Meanwhile, between August 1961 and February 1966, it is reported that without noticing the amendments made by the Mysore Act, land acquisition cases were transferred by District Judges in the Bombay Area to the Courts of Civil Judges (Senior Division), and eighty cases have been disposed of by those Courts. As the Civil Judges had no jurisdiction to deal with land acquisition cases during the period, the High Court of Mysore and the members of the Bar in the Bombay Area have suggested that the proceedings taken by the Civil Judges may by validated. "

In this connection, I want to ask, did not the Law Department point out that the Act which the Government had passed then was illegal. Perhaps the Government is seeking the permission of the House to validate these proceedings now because most of the lands of the landlords which have been acquired by the Government belong to the

members of the Opposition and the poor. The Law Minister just now stated that the Government has given full compensation. But I ask the Finance Minister whether they have given full compensation according to the decision of the Supreme Court, whether they have given it according to the market prices. According to me, the compensation given to the landlords is not according to market prices. You must therefore take a bold decision and declare the judgments of the Civil Judges as null and void and take due proceedings, and give full compensation to the landlords who are now sufferring. With these words, I oppose this Bill.

†ಶ್ರೀ ಹೆಚ್. ಎಸ್. ನಂಜೇಗೌಡ (ಅರಕಲಗೂಡು).—ಸ್ವಾಮೀ, ಇದರಲ್ಲಿ ಎರಡೇ ಎರಡು ಮುಖ್ಯ ವಿಷಯಗಳನ್ನು ಇಲ್ಲಿ ಹೇಳಬೇಕಾಗಿದೆ. ಮುಖ್ಯವಾಗಿ ಇಂತಹ ಸಭೆ ಯಲ್ಲಿ ಕಾನೂನು ಕಟ್ಟಲೆಗಳನ್ನು ಮಾಡುವಾಗ ಸರಿಯಾಗಿ ಮಾಡದೇ ಹೋದರೆ ಮುಂದೆ ಹೈಕೋರ್ಟು ಹಾಗೂ ಸುಪ್ರೀಂ ಕೋರ್ಟ್, ಕೈಹಾಕಬೇಕಾದ ಪ್ರಸಂಗ ಒದಗಬಹುದು. ಇದರಿಂದ ನಮಗೂ ಕೂಡ ಅಪಕೀರ್ತಿ ತರುವುದು ಸರಿಯಲ್ಲ. ಕಾಲಾವಕಾಶವಿಲ್ಲದೇ ಇರುವುದರಿಂದ ನಾನು ಇಲ್ಲಿ ಎರ್ಲಾ ರೆಫರೆನ್ಸ್‌ಗಳನ್ನು ಇಲ್ಲಿ ಕೋಟ್ ಮಾಡುವುದಕ್ಕೆ ಹೋಗುವುದಿಲ್ಲ. ನಮಗೆಲ್ಲ ಗೊತ್ತಿರುವಂತೆ ಎಷ್ಟೋ ಸಂದರ್ಭಗಳಲ್ಲಿ ಪಾರ್ಲಿಮೆಂಟಿನವರು ಮಾಡಿದ ಕಾನೂನುಗಳನ್ನೇ ಆರ್ಟಿಕಲ್ಸ್ ಎಂದು ಸುಪ್ರೀಂ ಕೋರ್ಟು ತೀರ್ಮಾನ ಕೊಟ್ಟಿರುವುದು ನೋಡಿದರೆ ಸರಕಾರ ಪ್ರಜಾಸತ್ತಾತ್ಮಕವಾದ ಕಾನೂನನ್ನು ಮಾಡಿಲ್ಲ ಎನ್ನುವುದು ಗೊತ್ತಾಗುತ್ತದೆ. ಇದರಮೇಲೆ ಇಂತಹ ರೋಪಗಳು ಬಂದಿರುವುದರಿಂದ ಇದಕ್ಕೆ ಯಾರು ಜವಾಬುದಾರರು ಎನ್ನುವುದನ್ನು ಸರಕಾರ ನೋಡಬೇಕು. ಸ್ಟೇಟ್‌ಮೆಂಟ್ ಆಫ್ ಅಬ್‌ಜಕ್ಟ್ಸ್ ಅಂಡ್ ರೀಸನ್ಸ್‌ಗಳಲ್ಲಿ "includes any other Civil Court empowered by the State Government.... etc." ಎಂದು ಇದೆ. ಇದನ್ನು ಗಮನಕ್ಕೆ ತೆಗೆದು ಕೊಳ್ಳದೆ ಡಿಸ್ಟ್ರಿಕ್ಟ್ ಜಡ್ಜ್‌ಗಳು ಬಾರ್‌ಬೇ ಏರಿಯಾದಲ್ಲಿ ಕಾನೂನಿಗೆ ವಿರೋಧವಾಗಿ ಕೇಸುಗಳನ್ನು ಟ್ರಾನ್ಸ್‌ಫರು ಮಾಡಿರುವುದು ಒಂದು ರೋಪ ಅದೂ ಅಲ್ಲದೆ ಅವರು ಕೊಟ್ಟ ತೀರ್ಮಾನವನ್ನು ಸರಿಯಾಗಿ ಕೊಡದೇ ರೋಪ ಮಾಡಿದ್ದಾರೆ ಹೀಗೆ ಮಾಡಿರುವಾಗ ಹೈ ಕೋರ್ಟಿನವರು ಅಪ್ರೈಸಲ್ ಮಾಡಿದ್ದಾರೆ, ಅದರಂತೆ ಮಾರ್ಪಾಡು ಮಾಡಿದ್ದೇವೆ ಎಂದು ಹೇಳುತ್ತೀರಿ. ಇದು ಒಂದು ರೀತಿಯಾದ ಬ್ಯಾಡ್ ಲಾ ಆಗಿದೆ ಇದನ್ನು ಹ್ಯಾವಾನಿಜೇರಿಯನ್ ಗ್ರೌಂಡ್ಸ್ ಮೇಲೆ ಮಾಡಿರುವುದೇನೋ ನಿಜ! ಆದರೆ ಒರಿಜಿನರ್ ಆಕ್ಟ್‌ನ್ನು ಇನ್ನೂ ರೆಕ್ಟಿಫೈ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಹಾಗಾಗಾದರೆ ಇಂತಹ ಅಮೆಂಡ್‌ಮೆಂಟನ್ನು ತರುವುದರ ಉದ್ದೇಶವಾದರೂ ಏನು? ಈ ಬಿಲ್ಲನ್ನು ತಂದಮ್ಮು ಮೊದಲನೇ ತಪ್ಪು. ಇದನ್ನು ವಾಪಸ್ಸು ತೆಗೆದುಕೊಳ್ಳದೆ ಪಾಸ್ ಮಾಡಿದರೆ, ಅದು ಎರಡನೇ ತಪ್ಪಾಗಬಹುದು ಎನ್ನುವ ಸಂದೇಹ ಇದೆ. ಇದನ್ನು ಇನ್ನೊಂದು ಸಾರಿ ಕೂಲಂಕಷವಾಗಿ ಆಲೋಚನೆ ಮಾಡಿ ಮತ್ತೊಮ್ಮೆ ತರಲಿ. ಆತುರಾತುರವಾಗಿ ತರುವುದು ಬೇಡವೆಂದು ಹೇಳುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಮಾನ್ಯ ಸದಸ್ಯರು ಈ ಮಸೂದೆಯ ಮೇಲೆ ವ್ಯಕ್ತ ಪಡಿಸಿದ ಅಭಿಪ್ರಾಯವನ್ನು ನಾನು ಕೂಲಂಕಷವಾಗಿ ಕೇಳಿದ್ದೇನೆ. ಅವರು ಏನು ಸರ್ಕಾರ ಒಂದು ದೊಡ್ಡ ಅಪರಾಧ ಮಾಡಿದೆ, ಕರ್ತವ್ಯ ರೋಪ ಮಾಡಿದೆ, ಈಗ ಅದಕ್ಕಾಗಿ ಈ ಸಭೆಯು ಮುಂದೆ, ಈ ಬಿಲ್ಲನ್ನು ತಂದು ತಾವು ಮಾಡಿದ ತಪ್ಪನ್ನು ಈ ಮೂಲಕ ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆಂದು ವಾದ ಮಾಡಿದ್ದಾರೆ. ಮತ್ತು ನಮ್ಮ ಕಾನೂನು ಇರಾಖೆ ಮತ್ತು ಸರ್ಕಾರಕ್ಕೆ ಕಾನೂನು ವಿಚಾರದಲ್ಲಿ ಯಾರು ಸಲಹೆಗಳನ್ನು ಮಾಡುತ್ತಾರೋ ಅವರ ಶಕ್ತಿ ಸಾಮರ್ಥ್ಯ, ಅವರ ಕೆಲಸ, ಕಾರ್ಯ ತತ್ಪರತೆಯ ವಿಚಾರಕ್ಕೂ ಕೂಡ ಪ್ರಶ್ನೆ ಮಾಡಿದ್ದಾರೆ, ಈ ರೀತಿಯ ಪ್ರಶ್ನೆ ಮಾಡಿದವರ ಪೈಕಿ, ಕೆಲವು ಸದಸ್ಯರು ಕೋರ್ಟಿನಲ್ಲಿ ವಕೀಲರಾಗಿ ಮೊಕದ್ದಮೆ ನಡೆಸುವವರೂ ಇದ್ದಾರೆ. ಅವರು ಈ ರೀತಿಯ ಪ್ರಶ್ನೆ ಮಾಡಿರುವುದನ್ನು ನೋಡಿದರೆ ಆಶ್ಚರ್ಯ ವಾಗುತ್ತದೆ. ಪ್ರತಿ ದಿವಸ ನೂರಾರು ಮೊಕದ್ದಮೆಗಳು ಕೋರ್ಟಿನಲ್ಲಿ ನಡೆಯುತ್ತವೆ. ಆ ಮೊಕದ್ದಮೆಗಳನ್ನು ನಡೆಸತಕ್ಕ ಅಧಿಕಾರ ಕೋರ್ಟಿಗೆ ಇದೆಯೇ ಇಲ್ಲವೇ ಎನ್ನತಕ್ಕ ಪ್ರಶ್ನೆ ಕೂಡ ಪ್ರಾಮುಖ್ಯವಾಗಿ ಜರ್ಡಿಯಾಗತಕ್ಕ ಸಂದರ್ಭ ಇರುತ್ತದೆ. ಒಂದೊಂದು ವೇಳೆ ಕೆಲವು ಕೋರ್ಟುಗಳು ತಮಗೆ ಈ ಮೊಕದ್ದಮೆಗಳನ್ನು ನಡೆಸತಕ್ಕ ಅಧಿಕಾರ ಇಲ್ಲದಿದ್ದ ಪಕ್ಷದಲ್ಲೂ ಕೂಡ ಇದೆಯಂತ ನಿರ್ಧಾರ ಮಾಡಿದ ಸಂದರ್ಭಗಳೂ ಇವೆ.

AN HON. MEMBER.—You could have taken it in revision or appeal if the court persisted.

ಶ್ರೀ ಕೆ. ಪುಟ್ಟಸ್ವಾಮಿ —ಅಂಥ ಸಂದರ್ಭದಲ್ಲಿ ವಕೀಲರು ಏನು ಮಾಡುತ್ತಾರೆ ? ವಕೀಲರು ಏನು ಮಾಡುತ್ತಾರೆಂದು ಮಾನ್ಯ ಮಿತ್ರರುಗಳಾದ ಇಲ್ಲಿನ ಸದಸ್ಯರಿಗೆ ಹೇಳಬೇಕಾಗಿಲ್ಲ. ಅಂಥ ಸಂದರ್ಭದಲ್ಲಿ ಅವರು ಮೇಲಿನ ಕೋರ್ಟಿಗೆ ಅಪೀಲ್ ಹಾಕಿಕೊಳ್ಳುವುದು, ರಿವಿಜನ್ ಹಾಕುವುದು ಇದ್ದೇ ಇದೆ 1961ರ ವರೆಗೆ ನಮ್ಮಲ್ಲಿ ಬಾಂಬೆ ರ್ಯಾಂಡ್ ಅಕ್ಟಿಸಿಶನ್ ಆಕ್ಟ್ ಜಾರಿಯಲ್ಲಿತ್ತು. 1961ರಲ್ಲಿ ಮೈಸೂರಿನಲ್ಲಿ ಬೇರೆ ಆಕ್ಟನ್ನು ಮಾಡಿದೆವು. 1961ಕ್ಕೆ ಮುಂದೆ ಇದ್ದಂತಹ ಅಧಿಕಾರ ರೀತಿಯಲ್ಲಿ ಅಲ್ಲಿದ್ದಂತಹ ಸೀನಿಯರ್ ಡಿವಿಜನ್ ಸಿವಿಲ್ ಕೋರ್ಟುಗಳು ರ್ಯಾಂಡ್ ಅಕ್ಟಿಸಿಶನ್ ಮೊಕದ್ದಮೆಗಳನ್ನು ತೀರ್ಮಾನ ಮಾಡುವುದಕ್ಕೆ ಅವಕಾಶ ಇತ್ತು. ಅವರಂತೆ ರ್ಯಾಂಡ್ ಅಕ್ಟಿಸಿಶನ್ ಕೇಸುಗಳನ್ನು ವಗ್ಗಾಯಿಸುತ್ತಿದ್ದರು ಆದರೆ ರ್ಯಾಂಡ್ ಅಕ್ಟಿಸಿಷನ್ ಆಕ್ಟಿಗೆ ಮೈಸೂರಿನಲ್ಲಿ 1961ರಲ್ಲಿ ತಿದ್ದುಪಡಿ ಮಾಡಿದಮೇಲೆ ಸರ್ಕಾರ ತಾನು ಅಪೇಕ್ಷೆಪಟ್ಟರೆ ಸಿವಿಲ್ ಜಡ್ಜಸ್‌ಗೆ ಆ ಅಧಿಕಾರವನ್ನು ಕೊಡಬಹುದು ಆದರೆ ಅಧಿಕಾರವನ್ನು ಸರ್ಕಾರ ಕೊಡಲಿಲ್ಲ. ಫೆಬ್ರವರಿ 1966ರವರೆಗೆ ಸರ್ಕಾರದವರು ಸಿವಿಲ್ ಜಡ್ಜಸ್ ಕೋರ್ಟಿಗೆ ಅಧಿಕಾರ ಕೊಡಲಿಲ್ಲ. ಮಧ್ಯೆ ಬಾಂಬೆಗೆ ಸೇರಿದಂತಹ ನಾಲ್ಕು ಜಿಲ್ಲೆಗಳಲ್ಲಿ ಸಿವಿಲ್ ಜಡ್ಜಸ್ ಕೋರ್ಟುಗಳಿಗೆ ಡಿಸ್ಟ್ರಿಕ್ ಜಡ್ಜಸ್ ಕೋರ್ಟಿನಿಂದ ಮೊಕದ್ದಮೆಗಳು ವರ್ಗಾವಣೆಯಾಗಿ ಆ ಕೇಸುಗಳನ್ನು ನಡೆಸಿದ್ದಾರೆ. ಇದು ಯಾರ ತಪ್ಪು ! ಇದಕ್ಕೆ ನಮ್ಮ ಕಾನೂನು ಇರಾಖೆ ಯಾವ್ಯಾವ ಕೋರ್ಟುಗಳಲ್ಲಿ ಯಾವ್ಯಾವ ಕೇಸು ಇಟ್ಟುತ್ತದೆ, ಅದರಲ್ಲಿ 'ಕ್ವಶ್ಚನ್ ಆಫ್ ಜುರಿಸ್‌ಡಿಕ್ಷನ್ ಪ್ರಶ್ನೆ' ಎದ್ದಿದೆಯೇ ಹಾಗೆ ಎದ್ದಿದ್ದರೆ, ಏನು ತೀರ್ಮಾನ ಮಾಡಿದ್ದಾರೆ ಎನ್ನುವುದನ್ನು ತಿಳಿಯಲು ಕಾದು ಕುಳಿತಿರಬೇಕೆಂದು ಮಾನ್ಯ ಸದಸ್ಯರು ತಿಳಿದುಕೊಂಡಿದ್ದಾರೆ.

Sri K. H. RANGANATH.—The Deputy Commissioner will refer the compensation applications to the District Court and Civil Judges Court. ಎರಡ್ಲೂ ಕೇಸುಗಳಲ್ಲಿಯೂ ಸರ್ಕಾರದವರು ಪ್ರತಿವಾದಿಯಾಗಿರುವುದರಿಂದ ಸರ್ಕಾರದ ವಕೀಲರು ಸರ್ಕಾರದ ಪರವಾಗಿ ಇರುತ್ತಾರೆ. It was his duty to raise this objection. ಈ ಬಿಲ್ಲನ್ನು ವಾಪಸು ತೆಗೆದುಕೊಂಡು ಇನ್ನೊಂದು ಅಮೆಂಡ್‌ಮೆಂಟ್ ಮಾಡಿ ಸರ್ಕಾರ ತಂದರೆ ಸರಿಹೋಗುತ್ತದೆ. ಅದಕ್ಕೆ ಬದಲಾಗಿ ಬೇರೆ ರೀತಿಯಲ್ಲಿ ಜಡ್ಜ್‌ಮೆಂಟ್ ವ್ಯಾಲಿಡೇಟ್ ಮಾಡಬೇಡಿ.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ರಂಗನಾಥಯವರು ಹೊಸ ವಿಚಾರ ಹೇಳುತ್ತಿದ್ದಾರೆ ಎಂದು ಕೂತುಕೊಂಡೆ. ಆದರೆ ಅವರು ಹಿಂದೆ ಹೇಳಿದ ವಿಚಾರವನ್ನು ಪುನಃ ಹೇಳಿದ್ದಾರೆ. ರ್ಯಾಂಡ್ ಅಕ್ಟಿಜಿಷನ್ ಕೋರ್ಟಿನಲ್ಲಿ ಸರ್ಕಾರದವರು ಕೂಡ ಪ್ರತಿವಾದಿಯಾಗಿರುತ್ತಾರೆ ಮತ್ತು ನಮ್ಮ ಸರ್ಕಾರದ ಪರವಾಗಿ ವಕೀಲರು ಕೇಸು ನಡೆಸುತ್ತಾರೆಂದು ಮಾನ್ಯ ಸದಸ್ಯರು ಹೇಳಿದರು. ಸರ್ಕಾರ ಎಂಥವರನ್ನು ನೇಮಿಸುತ್ತಾರೆ ಎನ್ನುವುದನ್ನು ಇದು ತೋರಿಸುತ್ತದೆ ಎಂದು ಹೇಳಿದರು. ಮಾನ್ಯ ಸದಸ್ಯರು ತಿಳಿದುಕೊಂಡಿರಬಹುದು, ನಾವು ನೇಮಿಸಿದಂತಹ ವಕೀಲರು ಒಳ್ಳೆಯವರಾಗಿದ್ದಾರೆ, ಅವರು ನಡೆಸುವ ಕೇಸು ಸರ್ಕಾರದ ಪರವಾಗಿ ಆಗುತ್ತದೆಂದು. ಅದು ಶುದ್ಧ ತಪ್ಪು. ಕೇಸ್ ಆಯಾ ವಿದ್ಯಮಾನಗಳನ್ನು ಅನುಸರಿಸುತ್ತವೆ. ನಾನು ಒಂದು ಪ್ರಶ್ನೆ ಮಾಡುತ್ತೇನೆ. ಮೂರು ನಾಲ್ಕು ಜಿಲ್ಲೆಯಲ್ಲಿ ನಾಲ್ಕು ಜನ ಗೌರ್ನಮೆಂಟ್ ಪ್ಲೀಡರ್ಸ್ ಕೇಸುಗಳನ್ನು ನಡೆಸಿದ್ದಾರೆ. 81 ಕೇಸುಗಳಲ್ಲಿ ಎಷ್ಟು ಪಾರ್ಟಿಗಳಿದ್ದರೋ ತಿಳಿಯದು. ಅವರೆಲ್ಲರೂ ವಕೀಲರನ್ನು ನೇಮಿಸಿಕೊಂಡಿದ್ದಾರೆ. ಯಾರಿಂದ ಒಳ್ಳೆಯ ನ್ಯಾಯ ದೊರಕಿಸಿಕೊಳ್ಳಬಹುದು, ಯಾರು ಸಮರ್ಥರಾಗಿ ಕೇಸ್ ನಡೆಸಬಲ್ಲರು, ಅಂಥವರನ್ನು ನೇಮಿಸಿಕೊಂಡಿದ್ದಾರೆ. ಆದರೆ ಈ 81 ಕೇಸುಗಳಲ್ಲಿಯೂ 81 ಜನ ವಕೀಲರು ಇದ್ದರೂ ಈ ಪ್ರಶ್ನೆ ಅವರ ಗಮನಕ್ಕೆ ಬರಲಿಲ್ಲ.

ಶ್ರೀ ಎ. ನಾಗಪ್ಪ.—ನಾನು ಹೇಳಿವಾಗ ಅವರು ಇರಲಿಲ್ಲ. ಅಪ್ಲಿಕೇಷ್ಟ್ಸ್ ಅಪ್ಲಿಕೇಷನ್ ಮಾಡಿದರು. ಸ್ಟೇ ಮಾಡಿದರು. ಸರ್ಕಾರ ಮತ್ತೆ ಕೇಸ್ ನಡೆಸಬೇಕೆಂದು ಆದೇಶ ಕೊಟ್ಟಿತು.

Sri B. B. SAYANAK.—Barrister Kelve in Belgaum took objection in the Belgaum Court and asked for stay, but the court did not grant stay.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸ್ಪೀಯನರ್‌ರವರು ಹೇಳುತ್ತಾರೆ, ಬ್ಯಾರಿಸ್ಟರ್ ಈ ವಿಚಾರವನ್ನು ಕೋರ್ಟು ಗಮನಕ್ಕೆ ತಂದರು ಎಂದು. ಅವರು ಈ ಸಭೆಯಲ್ಲಿ ಇಲ್ಲದಿರುವುದರಿಂದ ಅವರ ಬಗ್ಗೆ ಆಕ್ಷೇಪಣೆ ಬರುವಂತಹ ಮಾತು ನಾನು ಆಡುವುದಿಲ್ಲ. ಆದರೆ ಸಿವಿಲ್ ಜಡ್ಜ್ ಇವರ

ವಾದವನ್ನು ಒಪ್ಪದೆ ಹೋದ ಕಾಲದಲ್ಲಿ ಇವರು ಸರಿಯಾದಂತಹ ಲಾಯರಾಗಿದ್ದರೆ, ಮೇಲಿನ ಕೋರ್ಟಿಗೆ ಹೋಗಿ ಸರಿಪಡಿಸುತ್ತಿದ್ದರು.

Sri M. NAGAPPA.—I am sorry to say the Government is not competent to say what advocates have to do, but Government should see what its advocates are doing. They are paid servants and they must know how to conduct Government cases. I am sorry that the Hon. Minister being himself an advocate is passing such remarks against advocates.

Sri B. B. SAYANAK.—Why is the Minister passing such remarks against advocates ?

Mr. DEPUTY SPEAKER.—No remarks were passed against anybody.

Sri M. NAGAPPA.—The exact words used by the Hon. Minister may be looked into.

5-30 P.M.

Sri K. PUTTASWAMY.—Yes, Sir, that is my opinion. I repeat it again.

Sri D. B. KALMANKAR.—Why did the Government sleep over it all these years ? It shows that the Government has no competent persons.

Sri M. NAGAPPA.—Sir, I think, the Hon. Minister, being an eminent Advocate, is advocating his own advocates who have committed blunders.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರಾದ ಶ್ರೀ ನಾಗಪ್ಪನವರಿಂದ, ಈ ಸಭೆಯಲ್ಲಿ ನಾನು ಏನು ಹೇಳಬೇಕು, ಏನು ಹೇಳಬಾರದು, ಎನ್ನುವುದನ್ನು ಹೇಳಿಸಿಕೊಳ್ಳಬೇಕಾದ ದುಸ್ಥಿತಿ ಯಲ್ಲಿ ನಾನು ಇಲ್ಲ. ನಾನು ಹೇಳುವುದು ಸರಿ ಇದೆ. ಯಾರಾದರೂ ವಕೀಲರು ಕೇಸು ನಡೆಸು ವಂಥ ವೇಳೆಯಲ್ಲಿ ಕಾನೂನು ಸ್ಪಷ್ಟವಾಗಿದ್ದು, ಯಾವುದಾದರೂ ಒಂದು ಕಾರಣದಿಂದ ಅವರ ವಾದವನ್ನು ಎತ್ತಿ ಹಿಡಿಯದೆ ಇದ್ದರೆ ಮೇಲಿನ ಕೋರ್ಟಿಗೆ ಹೋಗಿ ಅದನ್ನು ಸರಿಪಡಿಸುವುದಕ್ಕೆ ಅವಕಾಶವಿರುವಾಗ ಆ ರೀತಿ ಸರಿಪಡಿಸಿಕೊಂಡು ಬರುತ್ತಾರೆ. ಆ ವಿಚಾರದಲ್ಲಿ ಮಾನ್ಯ ಸದಸ್ಯರು ಪ್ರಶ್ನೆ ಎತ್ತಿದ್ದರಿಂದ ಹೇಳುತ್ತೇನೆ, ಆ ವಿಚಾರದಲ್ಲಿ ತಕರಾರು ಯಾರಾದರೂ ಎತ್ತಿದ್ದರೆ, ಸಿವಿಲ್ ಜಡ್ಜ್ ಹತ್ತಿರ ಈ ತಕರಾರು ಎತ್ತಿದ್ದರೆ, ನಿಜವಾಗಿಯೂ ಕೂಡ ಅವರಿಗೆ ತಾವು ಎತ್ತಿದಂಥ ಕಾನೂನು ಅಂಶದಲ್ಲಿ ಅವರ ಅಭಿಪ್ರಾಯ ಸ್ಪಷ್ಟವಾಗಿದ್ದರೆ ಅವರು ಮೇಲಿನ ಕೋರ್ಟಿಗೆ ಹೋಗಿ ಸರಿಪಡಿಸಿ ಕೊಂಡು ಬರುತ್ತಿದ್ದರು. ಬಹುಶಃ ಅವರಲ್ಲಿ ಅಭಿಪ್ರಾಯ ಸ್ಪಷ್ಟವಾಗದೆ ಇದ್ದುದರಿಂದ ಅಲ್ಲಗೇ ಕೈ ಬಿಟ್ಟರು ಎಂದು ನಾನು ಹೇಳುತ್ತೇನೆ.

Sri D. B. KALMANKAR.—What your advocates did ; what the Government did when it was brought to their notice ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ಈ ವಿಚಾರವನ್ನು ಬಹಳ ಹೊತ್ತಿನಿಂದಲೂ ಮಾತನಾಡಿದರು. ಆವಾಗ ಅವರು ಹೇಳಿದುದನ್ನೆಲ್ಲ ಕೇಳಿದ್ದೇನೆ. ನಾನು ಮಧ್ಯೆ ಯಾವುದೂ ತಕರಾರು ಮಾಡಲಿಲ್ಲ, ಅವರು ಹೇಳಿದುದನ್ನೇ ಒತ್ತಿ ಒತ್ತಿ ಹೇಳುತ್ತಿದ್ದಾರೆ. ಅವರು ಪುನಃ ಪುನಃ ಹೇಳಿದುದನ್ನೆಲ್ಲ ನಾನು ಕೇಳಿದ್ದೇನೆ. ನಾನು ಮಾತನಾಡುವಾಗ ದಯವಿಟ್ಟು ಅವರು ಯಾವ ಅಡಚಣೆಯನ್ನೂ ಮಾಡದೆ ನಾನು ಹೇಳತಕ್ಕ ವಿಚಾರಗಳನ್ನು ಕೇಳಬೇಕು. ನಾನು ಹೇಳುವುದನ್ನು ಒಪ್ಪುವುದೂ, ಬಿಡುವುದೂ ಅವರಿಗೆ ಬಿಟ್ಟ ವಿಚಾರ.

(ಶ್ರೀ ಕೆ. ಪುಟ್ಟಸ್ವಾಮಿ)

ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿ ಹೈಕೋರ್ಟ್‌ನ್ನು ಇಲ್ಲಿಗೆ ಎಳೆದಿದ್ದೀರಿ, ಹೈಕೋರ್ಟ್ ಹೀಗೆ ಹೇಳಿದರೆ ಕೇಳುವುದಕ್ಕೆ ಏನು ಅಧಿಕಾರ, ಯಾವ ಕಾನೂನು ರೀತ್ಯ ಕೇಳಿದ್ದಾರೆ ಎಂದು ಹೇಳಿದರು. ಮತ್ತೆ ಉತ್ತರ ಕರ್ಣಾಟಕದ ಬಾರ್ ಅಸೋಸಿಯೇಷನ್‌ವರು ಈ ರೀತಿಯಲ್ಲಿ ವ್ಯಾಲಿಡೇಟಿಂಗ್ ಆಕ್ಟ್ ತೆಗೆದುಕೊಂಡು ಬನ್ನಿ ಎಂದು ಹೇಳಿದ್ದಾರೆ ಎನ್ನುವ ಅಭಿಪ್ರಾಯದಲ್ಲಿ ಹೇಳುತ್ತಿದ್ದೀರಿ, ಅವರನ್ನು ಏಕೆ ಎಳೆಯುತ್ತೀರಿ ಎಂದು ಕೇಳುತ್ತಾರೆ. ನಾನು ಈ ಸಭೆಯಲ್ಲಿ ಏನಂತಿ ಮಾಡಿಕೊಳ್ಳುವುದಕ್ಕೆ ಅಪೇಕ್ಷೆ ಪಡುತ್ತೇನೆ, ಯಾವುದು ಉಚಿತ, ಯಾವುದು ಅನುಚಿತ ಎನ್ನತಕ್ಕ ತೀರ್ಮಾನ ಮಾಡತಕ್ಕ ಶಕ್ತಿ ಸರ್ಕಾರಕ್ಕೆ ಇದೆ. ಇವರಿಗೆ ಯಾವುದು ಉಚಿತವಲ್ಲ ಎಂದು ಕಾಣುತ್ತದೆ ಅದು ನಮಗೂ ಕೂಡ ಉಚಿತವಲ್ಲ ಎಂದು ಕಾಣಲೇಬೇಕು ಎಂದು ಬಯಸಿದರೆ ಅದು ಶುದ್ಧಾಂಗವಾಗಿ ಸರಿಯಲ್ಲ. ಸರ್ಕಾರಕ್ಕೂ ಹೈಕೋರ್ಟ್‌ಗೂ ಆಗಿರತಕ್ಕ ವ್ಯವಹಾರವನ್ನು ಸಭೆಯ ಮುಂದೆ ಇಡಿ, ಅದನ್ನು ನೋಡಿ ಆಮೇಲೆ ನಮ್ಮ ಅಭಿಪ್ರಾಯವನ್ನು ತಿಳಿಸುತ್ತೇವೆ ಎಂದು ಹೇಳುತ್ತಾರೆ. ಯಾವುದರ ಪ್ರಕಾರ ಇಡಿ ಎಂದು ಕೇಳುತ್ತಾರೆ?

Sri M. NAGAPPA.—Rule 304 says that if a Minister quotes in the Assembly a despatch or other State paper which has not been presented to the Assembly, he shall lay the relevant paper on the Table. Therefore, we have every right to ask that such papers should be laid on the Table.

Sri N. G. HALAPPA.—Supposing this Validation Act is challenged in the High Court, are you not putting the High Court in an embarrassing position?

ಶ್ರೀ ಕೆ. ಪುಟ್ಟಸ್ವಾಮಿ.—ಈ ವಿಚಾರದಲ್ಲಿ ಎಲ್ಲ ಎಲೆಮಿಂಟರಿ ಪ್ರಿನ್ಸಿಪಲ್ಸ್ ನಮಗೆ ತಿಳಿಯುತ್ತದೆ. ಶ್ರೀಮಾನ್ ನಾಗಪ್ಪನವರು ಒಂದು ರೂಲ್ ಹೇಳಿದರು, ಮತ್ತು ಅದರ ಪ್ರಕಾರ ಸಭೆಯ ಮುಂದೆ ಇಡಬೇಕು ಎಂದು ಕೇಳಿದರು. ಆ ಲೆಟರ್ ನಾನು ಕೋಟ್ ಮಾಡಲಿಲ್ಲ. ಯಾವ ಲೆಟರ್‌ನ್ನು ಕೋಟ್ ಮಾಡಿ, ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆಂದರೆ ಅವರು ಆ ಲೆಟರ್‌ನ್ನು ಇಡಲೇಬೇಕು ಎಂದು ಹೇಳುವುದಕ್ಕೆ ಅವಕಾಶವಿದೆ. ಆಗಲೂ ಕೂಡ ಆ ಲೆಟರ್‌ನ್ನು ಇಡಬೇಕೇ ಬೇಡವೇ, ಈ ಸರ್ಕಾರಕ್ಕೂ ಮತ್ತು ಬೇರೆ ಬೇರೆ ಸಂಸ್ಥೆಗಳಿಗೂ ಆಗತಕ್ಕ ವ್ಯವಹಾರವೇನಿದೆ ಅದರಲ್ಲಿ ಯಾವುದನ್ನು ಸಭೆಯ ಮುಂದೆ ಇಡಬೇಕು, ಯಾವುದನ್ನು ಇಡಬಾರದು ಎನ್ನುವುದು ಸರ್ಕಾರದ ವಿವೇಚನೆಗೆ ಬಿಟ್ಟದ್ದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಈ ತಿದ್ದುಪಡಿಯನ್ನು ವಾಪಸು ತೆಗೆದುಕೊಂಡು ಬೇರೆ ಕಾನೂನು ತೆಗೆದುಕೊಂಡು ಬನ್ನಿ ಎಂದರೆ ಬೇರೆ ಯಾವ ಕಾನೂನು ತರಬೇಕು? ಯಾವುದರಲ್ಲಿ ಬೇರೆ ಕಾನೂನು ತರಬೇಕಾಗಿರುವುದು? ಈಗ ತಂದಿರುವುದರಲ್ಲಿ ಏನು ದೋಷವಿದೆ? ಲ್ಯಾಂಡ್ ಅಕ್ವಿಜಿಷನ್ ಆಕ್ಟ್‌ಗೆ ಅಥವಾ ಸಿವಿಲ್ ಕೋರ್ಟ್ ಜರಿಸ್‌ಡಿಕ್ಷನ್‌ಗೆ ಒಂದು ತಿದ್ದುಪಡಿ ತನ್ನಿ ಎಂದು ಹೇಳಬಹುದು. ಅದನ್ನಾದರೂ ತರಬಹುದು, ಈ ರೀತಿ ಆದರೂ ತರಬಹುದು. ಯಾವುದನ್ನು ತರಬೇಕು, ಯಾವುದನ್ನು ಬಿಡಬೇಕು ಎನ್ನುವುದು ಸರ್ಕಾರದ ವಿವೇಚನೆಗೆ ಒಳಪಟ್ಟುದು. ಕಾನೂನು ವಿಚಾರದಲ್ಲಿ ಯಾರು ತಜ್ಞರಿದ್ದಾರೆ ಅವರ ಅಭಿಪ್ರಾಯವನ್ನು ನಾವು ಪಡೆದಿದ್ದೇವೆ. ನಾವು ಮಾಡುತ್ತಿರುವುದು ಸರಿಯಾಗಿದೆ, ಕಾನೂನುಬದ್ಧವಾಗಿದೆ, ಇದರಲ್ಲಿ ಯಾವ ದೋಷವೂ ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಕೋರ್ಟಿನಲ್ಲಿ ಪೊಕದ್ದಮೆ ನಡೆಸುವುದಕ್ಕೆ ಸಂಬಂಧಪಟ್ಟ ಕಾನೂನುಗಳು ಯಾವುವು ಇವೆ, ಆ ವಿಚಾರದಲ್ಲಿ ಹೈಕೋರ್ಟ್ ಅಭಿಪ್ರಾಯವನ್ನು ನಾವು ಕೇಳಿಯೇ ಕೇಳುತ್ತೇವೆ. ಸಿವಿರ್ ಕೋರ್ಟ್ಸ್ ಆಕ್ಟ್ ಇದೆ. ಯಾವುದಾದರೂ ಒಂದು ಸಂದರ್ಭ ಬಂದಾಗ ಹೈಕೋರ್ಟ್ ಸಲಹೆ ಪಡೆಯುತ್ತೇವೆ. ಹೈಕೋರ್ಟ್ ಸಲಹೆ ಪಡೆದ ಮಾತ್ರಕ್ಕೆ ಹೈಕೋರ್ಟ್‌ನಲ್ಲಿ ಯಾವುದಾದರೂ ಇಂಥ ಮೊಕದ್ದಮೆ ಹೋದಾಗ ನಮಗೆ ಯಾವ ಸಲಹೆಯನ್ನು ಕೊಟ್ಟರು..... ...

Sri D. B. KALMANKAR.—Under what rules; under what provision of the Constitution you can take the opinion of the High Court?

Sri K. PUTTASWAMY.—Sir, I want to tell the hon. Members that no provision is necessary for consultation. It is the discretion of the Government to consult whomsoever it pleases.

Sri D. B. KALMANKAR.—The Hon. Minister is quoting something which is unknown. The High Court cannot give any opinion. It is a wrong procedure.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರಿಗೆ ನಾನು ಇಷ್ಟೆಲ್ಲ ಹೇಳಿದ ಮೇಲೂ ಕೂಡ ಅವರು ನಾನು ಏನು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿಲ್ಲ. ಇದು ಸರ್ಕಾರದಿಂದ ಆಗಲೀ, ಅಥವಾ ನಮ್ಮ ಕಾನೂನು ಇರಾಖೆಯಲ್ಲಾಗಲೀ ಆದಂಥ ತಪ್ಪು ಅಲ್ಲ. ಈ ಡಿಸ್ಟ್ರಿಕ್ಟ್ ಜಡ್ಜ್ ಅವರು ಸಿವಿಲ್ ಕೋರ್ಟಿಗೆ ಟ್ರಾನ್ಸ್‌ಫರ್ ಮಾಡುವುದಕ್ಕೆ ಅವಕಾಶವಿಲ್ಲದೆ ಇದ್ದರೂ, ಅಧಿಕಾರವಿಲ್ಲದೆ ಇದ್ದರೂ, ಆ ಕಾರ್ಯ ಮಾಡಿದರು ಸಿವಿಲ್ ಕೋರ್ಟಿಗೆ ಆ ಕೇಸುಗಳನ್ನು ನಡೆಸುವುದಕ್ಕೆ ಅಧಿಕಾರವಿಲ್ಲದೆ ಇದ್ದರೂ ಸಿವಿಲ್ ಕೋರ್ಟಿನಲ್ಲಿ ಕೇಸನ್ನು ನಡೆಸಿದರು. ಈ ಎಲ್ಲ ವ್ಯವಹಾರ ನಡೆಯುತ್ತಿದ್ದಾಗ ಅಲ್ಲಿ ಏನೇನು ನಡೆಯುತು ಎನ್ನುವುದು ನಮಗೆ ಗೊತ್ತಾಗಲಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಮಂತ್ರಿಗಳು ಈ ಬಗ್ಗೆ ಖಚಿತವಾಗಿ ಇದ್ದ ಹಾಗೆ ಕಾಣುತ್ತದೆ. ಅವರಿಗೆ ಅಧಿಕಾರವಿದೆ, ಮಾಡಬಹುದು. ರ್ಯಾಂಡ್ ಅಕ್ವಿಜಿಷನ್ ಆಕ್ಟ್‌ಗೆ ತಿದ್ದುಪಡಿ ತರಬೇಕು, ಈಗ ತಂದಿರುವ ತಿದ್ದುಪಡಿಯಿಂದ ತಾವು ಒಳ್ಳೆಯ ಕೆಲಸ ಮಾಡಿದ್ದೇವೆಂಬ ಅಭಿಪ್ರಾಯ ಇರುವುದರಿಂದ ಯಾವುದಕ್ಕೆ ತಿದ್ದುಪಡಿಯನ್ನು ತರುವುದು ಸೂಕ್ತ ಎಂದು ಹೇಳಿದೆವು. ನಾನು ಮಾಡುವುದೇ ಸರಿ ಎನ್ನುವ ಧೋರಣೆಯನ್ನು ಮಾನ್ಯ ಮಂತ್ರಿಗಳು ತಾಳುವುದಾದರೆ ಅದಕ್ಕೆ ನಮ್ಮ ಉತ್ತರವೇನೂ ಇಲ್ಲ. ಅವರಿಗೆ ಅಧಿಕಾರವಿದೆ, ಬಹುಮತವಿದೆ. ಪಾಸ್ ಮಾಡಬಹುದು. ನಾವು ಹೇಳುವುದರಲ್ಲಿ ಸರಿ ಕಂಡರೆ ಅವರು ವಿಚಾರವನ್ನು ಬದಲಾವಣೆ ಮಾಡಿಕೊಳ್ಳುದರಲ್ಲಿ ತಪ್ಪು ಆಗುವುದಿಲ್ಲ. ಅರ್ಜಿದಾರರ ವಕೀಲರ ಬಗ್ಗೆ ಕಾಮೆಂಟ್ ಮಾಡುತ್ತಿದ್ದಾರೆ. ಕೇಸುಗಳು ಟ್ರಾನ್ಸ್‌ಫರ್ ಆಗಿದ್ದರೂ ಅವರಿಗೆ ಕಾಂಪೆನ್‌ಸೇಷನ್ ಬಂದರೆ ಸಾಕು. In all these cases, the Advocate for the petitioner is in an advantageous position; the Government is in a disadvantageous position. ರ್ಯಾಂಡ್ ಅವಾರ್ಡ್ ಪಾಸಾದಾಗ ಅದು ಕಡಮೆಯಾಗಿದೆ ಎಂದು ಕಂಡು ಬಂದರೆ ವಾತ್ಸ ಅರ್ಜಿದಾರ ಕೋರ್ಟಿಗೆ ಹೋಗುತ್ತಾನೆ. ರ್ಯಾಂಡ್ ಅಕ್ವಿಜಿಷನ್ ಕೇಸುಗಳಲ್ಲಿ ಆಗಾಗ ಸರ್ಕಾರ ಪ್ರತಿವಾದಿಯಾಗಿರುತ್ತದೆ. ಆದ್ದರಿಂದ ಯಾರು ಮೊದಲು ಆಕ್ಷೇಪಣೆಯನ್ನು ಎತ್ತಬೇಕಾಗಿತ್ತು? Who should have taken the initial objection? ಏನೋ ಹೇಳುವುದು, ಏನೋ ಕೇಳುವುದು ಆದರೆ ನಾವು ಇರಬೇಕಾದ ಅವಶ್ಯಕತೆ ಇಲ್ಲ. ನಾನು ಹೇಳುವುದನ್ನು ಕೇಳುವುದಕ್ಕೆ ತಯಾರಾಗಿಲ್ಲ ಎಂದರೇನು ಅರ್ಥ? ದೇಶದ ಹಣ ಏಕೆ ಇಲ್ಲಿ ಹಾಳು ಮಾಡಬೇಕು?

Mr. DEPUTY SPEAKER.—Hon. Members should not intervene when the Hon. Minister is replying and when he has not yielded. If Hon. Members have any doubts, I will permit clarifications after the Minister concludes his reply.

Sri D. M. SIDDAIAH.—I rise to a point of order. I would like to know from the hon. Chair, whenever any hon. member wants to intervene, is it not necessary that the concerned Minister who is on his legs, if he so desires, has to yield? If he refuses to yield, I do not see how any hon. Member could rise to speak. I want a ruling from the hon. Chair.

ಶ್ರೀ ಕೆ. ಎಚ್. ರಂಗನಾಥ್.—ನಾನು ಅಧ್ಯಕ್ಷರಲ್ಲಿ ವಿನಂತಿಮಾಡುವುದು ಏನೆಂದರೆ ಕಾಲಹರಣ ಮಾಡಬೇಕೆಂಬ ಅಭಿಪ್ರಾಯ ನಮಗಿಲ್ಲ. ಆ ಅಭಿಪ್ರಾಯವಿದ್ದರೆ ನಾನು ಬಹಳ ವಿಷಾದ ಪಡಬೇಕಾಗಿದೆ. ನಾವು ಹೇಳುವಾಗ ಮಂತ್ರಿಗಳು ಸ್ವಲ್ಪ ಕೇಳಿದರೆ ಒಳ್ಳೆಯದು. ಯೀರ್ಡ್ ಆಗಿಲ್ಲ ಅದುದರಿಂದ ಹೇಳುವುದು ಬೇಡ ಎಂದರೆ ನಾವು ನುಮ್ಮನೆ ಕುಳಿತುಬಿಡುತ್ತೇವೆ. ಗಲಾಟೆ ಮಾಡಿ ಹೋಗಬೇಕೆಂದು ನಾವು ಇಲ್ಲಿಗೆ ಬಂದಿಲ್ಲ. ನಾವು ಹೇಳುವುದನ್ನು ಕೇಳಲು ಇಷ್ಟವಿದ್ದರೆ ಕೇಳಿ; ಇಲ್ಲದಿದ್ದರೆ ಬಿಡಿ. ನಾವು ಹೇಳುವುದರಲ್ಲಿ ಅರ್ಥವಿರುವಾಗ ಅದನ್ನು ಒಪ್ಪಿಕೊಂಡರೆ ಘನತೆ ಇರುತ್ತದೆ. ಯಾರೂ ಮಾತನಾಡಬಾರದು ಅಂದರೆ ನಾವು ಮಾತನಾಡುವುದೇ ಇಲ್ಲ. ಬಹುಮತವಿದೆ ಎಂದ ಏನು ಬೇಕಾದರೂ ನೀವು ಮಾಡಿಕೊಂಡು ಹೋಗಬಹುದು. ಪ್ರತಿ ಮಾತಿಗೂ

(ಶ್ರೀ ಕೆ. ಎಚ್. ರಂಗನಾಥ್)

ಇದು ಪ್ರಜಾಪ್ರಭುತ್ವ, ಹೀಗೆ ಮಾಡುವುದು ತಪ್ಪು ಎಂದು ಹೇಳುತ್ತೀರಿ. ರ್ಯಾಂಡ್ ಅಕ್ಸಿಜಿಷನ್ ಕೇಸಿನಲ್ಲಿ ಯಾರಿಗೆ ನಷ್ಟವಾಗುವುದು ? ಯಾರು ಪ್ರತಿವಾದಿ ?

Mr. DEPUTY SPEAKER.—I had already permitted the member to participate in the discussion. He could have expressed his views then.

ಶ್ರೀ ಕೆ. ಪುಟ್ಟಸ್ವಾಮಿ.—ನಾನು ಮಾತನಾಡುವಾಗ ಮಧ್ಯೆ ಸದಸ್ಯರು ಏನಾದರೂ ಕೇಳಿದರೆ ನಾನು ಕುಳಿತು ಅವರು ಹೇಳುವುದನ್ನು ಕೇಳುವುದುಂಟು. ಅದು ನನ್ನ ಅಭ್ಯಾಸ. ಈ ದಿವಸ ಶ್ರೀಮಾನ್ ರಂಗನಾಥ್‌ರವರು ಒಂದು ವಿಚಾರ ಹೇಳುವುದಕ್ಕೆ ಎದ್ದವರು ಒಂದು ಪುಟ್ಟ ಭಾಷಣ ವನ್ನೇ ಮಾಡಿದರು, ಹೊಸ ಪಾಯಿಂಟ್ ಹೇಳಿದ್ದರೆ ಹತ್ತು ಸಾರಿಯಾದರೂ ಹೇಳಬಹುದಾಗಿತ್ತು. ಕ್ಷಮಿಸಬೇಕು, ಇಲ್ಲ ಚರ್ಚೆ ಏಕಮುಖವಾಗಿ ಆಗಬೇಕು, ಅವರು ಏನು ಹೇಳಿದರೂ ಕೇಳಬೇಕು ಎಂದು ಹೇಳುವಾಗ ಪ್ರತಿಯಾಗಿ ನಾನು ಹೇಳಿದರೆ ಅವರು ಕೇಳುವುದಕ್ಕಾಗುವುದಿಲ್ಲ. ಹಿಂದೆ ಮಂತ್ರಿಯಾಗಿದ್ದವರು ಸ್ಟೇಟ್‌ಮೆಂಟ್ ಆಫ್ ಅಬ್‌ಜೆಕ್ಟ್ಸ್ ಅಂಡ್ ರೀಸನ್ಸ್‌ಗೆ ರುಜು ಹಾಕಿದ್ದಾರೆ, ಬಹುಶಃ ಅವರು ನೋಡಿರರಾರರು ಎಂದು ಹೇಳಿದರು. ಈ ಸಭೆಯಲ್ಲ ಮನೂದೆಯನ್ನು ಮಂಡಿನುವಾಗ ಯಾವ ತಿದ್ದುಪಡಿ ತಂದಿದೆ, ಅದರ ಅವಶ್ಯಕತೆಯೇನು, ಕಾರಣವಿದೆಯೇ, ಇಲ್ಲವೇ ಎಂಬುದನ್ನು ಮನವರಿಕೆ ಮಾಡಿಕೊಳ್ಳದೆ, ನೋಡದೆ ಹಿಂದೆ ತಯಾರಾಗಿದೆ ಎಂದು ಸಭೆಯಲ್ಲ ಮಂಡಿಸಿ ಅದಕ್ಕೆ ಒಪ್ಪಿಗೆ ಪಡೆಯಬೇಕೆಂಬ ಉದ್ಧಟತನ ನನ್ನಲ್ಲಲ್ಲ. ಮನೂದೆಯನ್ನು ತರುವಾಗ ಅದರ ಅವಶ್ಯಕತೆ ಏನಿದೆ ಎಂದು ನೋಡಿ ಸಂಪೂರ್ಣವಾಗಿ ಅಧ್ಯಯನ ಮಾಡಿ ತಂದಿರುವುದು. ಶ್ರೀ ರಂಗನಾಥ್‌ರವರ ಅಭಿಪ್ರಾಯದಲ್ಲಿ ನಾವು ಅಧ್ಯಯನ ಮಾಡುವುದಿಲ್ಲ ಎಂದಿದ್ದರೆ ಅವರು ಅದನ್ನು ದಯೆಯಿಟ್ಟು ಓದಬೇಕು. ನನ್ನ ಅಭಿಪ್ರಾಯದಲ್ಲಿ ಇಷ್ಟು ಚರ್ಚೆಯಾಗಬೇಕಾದ ಮನೂದೆ ಇದಲ್ಲ. ಆದರೆ ಚರ್ಚೆಯಾಯಿತು, ಒಳ್ಳೆಯದೇ ಆಯಿತು. ಮಾನ್ಯ ಸದಸ್ಯರು ಹಲವಾರು ಅಭಿಪ್ರಾಯ ಗಳನ್ನು ಸೂಚಿಸಿದ್ದಾರೆ, ಅದಕ್ಕೆ ನಾನು ಕೃತಜ್ಞನಾಗಿದ್ದೇನೆ. ಪ್ರಾಮುಖ್ಯವಾದ ಅಭಿಪ್ರಾಯ ಏನೆಂದರೆ ಈ ರೀತಿ ಜುರಿಸ್‌ಡಿಕ್‌ಷನ್ ಬೆಳೆಸುವುದಕ್ಕಾಗುವುದಿಲ್ಲ, ಹೊಸದಾಗಿ ಕೊಡುವುದಕ್ಕಾಗು ವದಿಲ್ಲ ಅದರಲ್ಲೂ ರೆಟ್ರಾಸ್‌ಪೆಕ್ಟಿವ್ ಎಫೆಕ್ಟ್ ಕೊಡುವುದಕ್ಕಾಗುವುದಿಲ್ಲ ಎಂಬುದು. ಅದನ್ನು ಹೇಳಿದ್ದಾರೆ.

Sri B. B. SAYANAK.—Sir, I want to know whether you have given a ruling on the point of order raised by hon. Member Sri D. M. Siddaiah.

Mr. DEPUTY SPEAKER.—I uphold the point of order raised by hon. Member Sri D. M. Siddaiah.

ಶ್ರೀ ಕೆ. ಪುಟ್ಟಸ್ವಾಮಿ.—ಒಂದೊಂದು ವೇಳೆ ಕಂಡದ್ದು ಹೇಳಿದರೆ ಕೆಂಡದಂಥ ಕೋಪ ಬರುವುದು. ನಾನು ಹೇಳುವುದನ್ನು ಸಹನೆಯಿಂದ 5 ನಿಮಿಷ ಕೇಳಿದರೆ ಅರ್ಥವಾಗುತ್ತದೆ.

Sri K. H. RANGANATH.—I am very sorry. If the hon. Minister were to mean me, I am really very sorry, Sir.

Sri K. PUTTASWAMY.—I make a personal request to hon. Member Sri K. H. Ranganath to kindly bear with me for sometime.

A validating Act may be given retrospective effect like any other enactment so as to validate an enactment held to be void, with effect from the very date when it had been passed notwithstanding any change in the situation.

It can confer jurisdiction upon a Court with retrospective effect and validate sentences passed without jurisdiction.

ಆದ್ದರಿಂದ ನಾನು ತಂದಿರತಕ್ಕ ಮನೂದೆಯಲ್ಲ ಯಾವ ವಿಧವಾದ ದೋಷವೂ ಇಲ್ಲ, ಮತ್ತು ಇದು ಕೇವಲ ಕೆಲವು ಮೊಕದ್ದಮೆಗಳಿಗೆ ಸಂಬಂಧಪಟ್ಟಿರುವುದರಿಂದ ಅದೂ ಅಲ್ಲದೇ 1966ನೇ

ಫೆಬ್ರುವರಿ 15ರಿಂದ ಎಲ್ಲಾ ಸಿವಿಲ್ ಜಡ್ಜ್ ಕೋರ್ಟುಗಳಿಗೂ ಕೂಡ ಈ ಅಧಿಕಾರವನ್ನು ಸರ್ಕಾರ ಕೊಟ್ಟಿರುವುದರಿಂದ ಈಗ ತಂದಿರತಕ್ಕ ರೂಪದಲ್ಲಿಯೇ ಈ ತಿದ್ದುಪಡಿ ಮಸೂದೆ ಅನುಮೋದಿತವಾದರೆ ಈಗಿರತಕ್ಕ 81 ಕೇಸುಗಳಲ್ಲಿ ಏನು ದೋಷ ಇದೆ ಅದನ್ನು ತಿದ್ದಿದಂತಾಗುತ್ತದೆ. ಆದ್ದರಿಂದ ನಭೆ ದಯವಿಟ್ಟು ಇದಕ್ಕೆ ಅನುಮತಿ ಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

Sri D. B. KALMANKAR.—Under what provision of the Constitution or law, you can approach the High Court or the Supreme Court ?

Sri K. PUTTASWAMY.—I would like to make it very clear to the Hon'ble Member that there need not be any provision in the Constitution or any other law for the Government to consult anybody or any Institution.

Sri N. G. HALAPPA.—It would be an embarrassing position for the High Court to give its opinion on this subject.

Sri K. PUTTASWAMY.—There would be no embarrasing position on the part of the High Court as there are a number of such instances. The High Court gives its opinion in an executive capacity and at the same time it can give its opinion in the capacity of a Judicial body. The opinions may differ from each other.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ ಆಗಲೇ ನಾನು ಹೇಳಿದೆ ತಾವು ಇರಲಿಲ್ಲ ಎಂದು ನನ್ನ ಭಾವನೆ, ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿ ಹೈಕೋರ್ಟ್ ಆಫ್ ಮೈಸೂರು ಮತ್ತು ಮೆಂಬರ್ಸ್ ಆಫ್ ದಿ ಬಾರ್ ಇನ್ ಬಾಂಬೆ ಏರಿಯಾ ಅವರು ಮಾಡಿರತಕ್ಕ ನಲಹೆ ಪ್ರಕಾರ ಎಂದು ತಿಳಿಸಿದ್ದೀರಿ. ಅಡ್ವೋಕೇಟ್ ಜನರಲ್‌ರವರನ್ನು ಏಕೆ ಕನ್‌ಸರ್ಟ್ ಮಾಡಲಿಲ್ಲ ಎಂಬುದಕ್ಕೆ ಕಾರಣ ಕೊಡುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಶ್ರೀಮಾನ್ ಬಂಗಾರಪ್ಪನವರು ಮಾತನಾಡಿದಾಗ ನಾನು ಇದ್ದೆ, ಅವರು ಈ ಪಾಯಿಂಟ್ ಎತ್ತಿದ್ದರು, ನಾನು ಮೊದಲೇ ಸೂಚ್ಯವಾಗಿ ಹೇಳಿದ್ದೇನೆ. ಕಾನೂನು ವಿಚಾರದಲ್ಲಿ ಯಾರ್ಯಾರು ನಲಹೆಗಾರರು ಇದ್ದಾರೋ ಅವರನ್ನೆಲ್ಲಾ ಕೇಳಿ ಈ ಒಂದು ತಿದ್ದುಪಡಿಯನ್ನು ತಂದಿದ್ದೇವೆ.

ಶ್ರೀ ಎಂ. ನಾಗಪ್ಪ.—ನಾನಾಗಲೇ ತಮ್ಮನ್ನು ಒಂದು ಕ್ಲಾರಿಫಿಕೇಷನ್ ಕೇಳಿದ್ದೆ. ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿ ತಾವು ರೆಫರೆನ್ಸ್ ಮಾಡಿದ್ದೀರಿ. ಹೈಕೋರ್ಟ್ ನಮಗೆ ಅಡ್ವೈಸ್ ಮಾಡಿದೆ, ಅದನ್ನು ತಾವು ಈ ನಭೆಯ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೀರಾ ? ಇಚ್ಛೆ ಇಲ್ಲದೇ ಇದ್ದರೆ ಸ್ಪೀಕರ್‌ರವರಿಗಾದರೂ ತೋರಿಸಿ. ಅದನ್ನು ಈ ನಭೆಯಲ್ಲಿ ಇಡಕೂಡದು ಜನತೆಗೆ ಸಹಿತ ಅದು ಗೊತ್ತಾಗಕೂಡದು ಎಂದರೆ ಅದರಲ್ಲಿ ಏನೋ ಕಾನ್‌ಫಿಡೆನ್‌ಷಿಯಲ್ ಇದೆ ಅಂತ ಅರ್ಥವಾಗುತ್ತದೆ.

ಶ್ರೀ ಕೆ. ಪುಟ್ಟಸ್ವಾಮಿ.—ನಾನು ಉತ್ತರ ಹೇಳಿದಾಗಲೇ ಮಾನ್ಯ ಸದಸ್ಯರು ಅರ್ಥಮಾಡಿಕೊಂಡಿರಬಹುದು. ಇದು ಅಂತಹ ಕಾನ್‌ಫಿಡೆನಿಯಲ್ ಡಾಕ್ಯುಮೆಂಟು ಅಂತ ಹೇಳಿ ಇದನ್ನು ಇಡುವುದಲ್ಲ ಅಂತ ಹೇಳಿ ನಾನು ಸ್ಟ್ಯಾಂಡ್ ತೆಗೆದುಕೊಂಡಿಲ್ಲ. ಸ್ಪೀಕರ್‌ರವರು ಅಪೇಕ್ಷೆಪಟ್ಟರೆ ಯಾವುದನ್ನೂ ಕೂಡ ವಿತ್‌ಹೋರ್ಡ್ ಮಾಡತಕ್ಕ ಅಧಿಕಾರ ಸರ್ಕಾರಕ್ಕೆ ಇಲ್ಲ. ಅವರು ಅಪೇಕ್ಷೆಪಟ್ಟರೆ ಯಾವುದೇ ಡಾಕ್ಯುಮೆಂಟ್ ಆಗಲಿ ಅದನ್ನು ತೋರಿಸಬೇಕು. ಪ್ರಸಕ್ತ ವಿಚಾರದಲ್ಲಿ ನಮಗೂ ಹೈಕೋರ್ಟಿಗೂ ಆಗಿರತಕ್ಕ ಕರೆಸ್ಪಾನ್‌ಡೆನ್ಸ್ ಏನಿದೆ ಅದನ್ನು ನಭೆಯಲ್ಲಿ ಇಡಬೇಕಾದ ಅಗತ್ಯವಿಲ್ಲ ಎಂದು ನನ್ನ ಭಾವನೆ.

ಶ್ರೀ ಎಂ. ನಾಗಪ್ಪ.—ಪಾಯಿಂಟ್ ಆಫ್ ಆರ್ಡರ್ ಸರ್. ಕಾನ ಫಿಡೆನ್‌ಷಿಯರ್ ಅಲ್ಲದೆ ಇದ್ದಮೇಲೆ ಅದನ್ನು ಟೇಬಲ್‌ಮೇಲೆ ಇಡುವುದು ಬಹಳ ಅವಶ್ಯಕ. ಇದು ಕಾನ್‌ಫಿಡೆನ್‌ಷಿಯರ್, ನಭೆಯ ಗಮನಕ್ಕೆ ಆಥವಾ ಬೇರೆ ಜನರಿಗೆ ಏನು ನಡೆಯುತಿದು ಗೊತ್ತಾಗಬಾರದು ಎಂದು ಇಟ್ಟರೆ ಅದು ಬೇರೆ ವಿಷಯ. The Government is bound to keep a copy of the documents on the Table of the House. I am entitled to see them,

(ಶ್ರೀ ಎಂ. ನಾಗಪ್ಪ)

Therefore, I request the Chair to arrange for placing all the copies of the correspondence on the Table of the House, so that I could go through them.

Sri H. N. NANJE GOWDA.—The Bill is before the House and I am supporting Sri Nagappa. It is stated in the statement of objects and reasons, the Government have referred to suggestions made by the High Court. Before taking a decision, it is the privilege of the House to know the details as to the suggestions given by the High Court, otherwise the statement of the Government will be far from truth. If they have really done this, we can excuse them in the name of the highest judiciary in the State. Therefore, the House wants to know the correspondence that passed between the High Court and the Government. If they do not do that and if they are bringing this Bill under the pretext that this is the opinion of the High Court, it will be highly irregular. They must say what is the suggestion of the High Court.

ಶ್ರೀ ಎಂ. ನಾಗಪ್ಪ.—ರೂಲ್ 304ರಲ್ಲಿ ಎರಡು ಪ್ರೊವಿಸೋ ಇದೆ, ಒಂದರ ಪ್ರಕಾರ ಕಾನ್‌ಫಿಡೆನ್‌ಷಿಯಲ್ ಅಲ್ಲ ಎಂದರೂ ಪಬ್ಲಿಕ್ ಇಂಟರೆಸ್ಟ್‌ನಲ್ಲಿ ಅದನ್ನು ಹೊರಗೆಡುವುದು ಸಾಧ್ಯ ಎಲ್ಲ ಎಂಬುದು ಒಂದು. ಜಿಸ್ಟ್ ಹೇಳಿದರೆ ಸಾಕಾಗುತ್ತದೆ. ಆ ಕಾಗದದ ಜಿಸ್ಟ್ ಕೂಡ ಅವರು ಹೇಳಿಲ್ಲ, ಅದಕ್ಕಾಗಿಯೇ ಕ್ಲಾರಿಫಿಕೇಷನ್ ಕೇಳುತ್ತಾ ಇದ್ದೇನೆ.

ಉಪಾಧ್ಯಕ್ಷರು.—ರೂಲ್ 304 ರಲ್ಲಿ ಅದು ಕ್ಲಿಯರ್ ಆಗಿ ಇದೆ.

ಶ್ರೀ ಎಂ. ನಾಗಪ್ಪ.—ಬಿರ್‌ನಲ್ಲಿ ಇದೆ ಅದನ್ನು ತಾವು ದಯವಿಟ್ಟು ನೋಡಬೇಕು.

Sri D. B. KALMANKAR.—The Statement of objects and reasons has referred to the advice given by the High Court. As required by Sri Nagappa, all the correspondence should be placed on the Table of the House. Usually the High Court does not advise. Under Article 305, they have to seek the advice of the Advocate General. If it is not possible to place it before the House my submission is that the High Court's instructions must be expunged; otherwise controversy may arise.

Sri M. NAGAPPA.—In the Bill it is stated that the High Court of Mysore have suggested something. This statement may be deleted.

6-00 P.M.

Mr. DEPUTY SPEAKER.—The Minister has already stated that the High Court might have given advice in an executive capacity. He has already clarified that point.

Sri M. NAGAPPA.—If the hon'ble Minister says that he is not going to disclose in public interest, I will not press it. * * *

* * Expunged as ordered by the Chair.

Mr. DEPUTY SPEAKER.—The question is:

"That the Mysore Courts of Civil Judges (Validation of Proceedings) Bill, 1967, be taken into consideration."

The otion was madopted.

CALUSES

Mr. DEPUTY SPEAKER.—I will put the clauses. The question is

"That clause 2 do stand part of the Bill."

The motion was adopted.

Clause 2 was added to the Bill.

Mr. DEPUTY SPEAKER.—The question is:

"That clause 1, the long title and the Enacting formulae do stand part of the Bill."

The motion was adopted.

Clause 1, the long Title and the Enacting formulae were added to the Bill.

Motion to pass.

Sri K. PUTTASWAMY.—Sir, I beg to move:

"That the Mysore Courts of Civil Judges (Validation of Proceedings) Bill, 1967, be passed."

Mr. DEPUTY SPEAKER.—The question is:

"That the Mysore Courts of Civil Judges (Validation of Proceedings) Bill, 1967, be passed."

The motion was adopted.

Sri M. S. KRISHNAN.—On a Point of order, Sir. When the Bill was moved for the third Reading, we have a right to object. We have a right to say what we want to say. The Hon. Member Sri V. N. Patil stood up even before the Chair put the motion to the House and he was not given a chance to speak. It would not be in accordance with the Rules of Procedure.

Mr. DEPUTY SPEAKER.—I have strictly followed the Rules.

Sri V. N. PATIL.—Sir, you have not followed the Rules.

Sri M. S. KRISHNAN.—I have raised a point of order saying that we were not given an opportunity to speak when the Bill was proposed for the third Reading. Even before you proposed it to the House, my

(SRI M. S. KRISHNAN)

friend Sri V. N. Patil stood up to speak. You did not give an opportunity to speak. That is not in accordance with the Rules. I would like to have your ruling on this point.

MR. DEPUTY SPEAKER.—There is no merit in the point of order. The Chair has strictly followed the Rules.

SRI V. N. PATIL.—I rise to a point of order, Sir. It is not fair to hustle through a legislative measure in this manner. Before the third Reading of the Bill was taken up, I wanted to say certain things. I was not given an opportunity and it was put to the vote of the House. Probably, the Chair was guided or influenced by the Secretary and Deputy Secretary who are sitting there. I suppose they are not here to give directions to the Chair. They are there only to give advice. But if they are going to give directions to the Speaker, we are not going to tolerate. The officials should not influence the Chair in its conduct. They cannot direct the Chair. I take strong objection to this and I request the Chair to correct their actions. When I stood up to offer remarks, it was for the Chair to decide whether an opportunity should be given to me or not. It is not for the officials sitting there to direct the Chair to do this or that. Are we here to give our consent to the Bill after discussing the merits, or is it only the duty of the Chair to put it to vote? Normally it is not your concern how it is done. We respect you. In the past you have always heard our views and given us every opportunity. Today we do not know under what circumstances you are doing this. You have been very considerate all along and you have given us maximum opporunities. Today, we are very sorry you have shut out all discussions and you have hustled through the Bill. Do not create bad precedents. We must be heard on the merit of the matter.

SRI M. NAGAPPA.—Sir, on a point of order. I am sorry to say that Bills are not to be passed in this manner in this House, particularly. These laws are going to be applied on the poor people of the country. If we pass this in such a way, I do not think we are leading the country to the desired goal. You have completed the clause by clause stage. Consideration of clause 1, Title and Preamble, is not gone through. Even then, if you ask for "Ayes" and "Nos" the members have chance of again opposing. Please see rule 91 It runs as :

> "(1) When a motion that a Bill be taken into consideration has been carried and no amendment of the Bill is made, the member in charge may at once move that the Bill be passed.
>
> (2) If any amendment of the Bill is made, any member may object to any motion being made on the same day that the Bill be passed and such objection shall prevail unless the Speaker allows the motion to be made."

Then we go to rule 92 :

"The discussion on a motion that the Bill or the Bill as amended, as the case may be, be passed shall be confined to the submission of arguments either in support of the Bill or for the rejection of the Bill. In making his speech a member shall not refer to the details of the Bill further than is necessary for the purpose of his arguments which shall be of a general character".

This right vested under rule 92 has been taken away by putting the matter to vote. So our right under rule 92 is taken away. Therefore you have deviated from the rules of procedure. Whereas the Minister says that they are not guided by rules. If this is the way the treasury benches were to follow, then I do not know what I should say. Such a valuable right has been taken away when we have the right to speak a second time. I submit we may be permitted under rule 92 to speak and express our opinion. Merely saying that we are following rules, is not enough. The rules are there to be respected and followed, not only by this side but also the other side. I submit that rule 92 has been violated and that may be corrected and some of the members on this side may be permitted to speak. If anybody on the other side wants to speak to support the Bill, that can also be done. I hope the Chair will co-operate and it will give time to the members to speak.

Mr. DEPUTY SPEAKER.—I do not want any member to speak. The Bill is already passed and no rule is violated.

ಶ್ರೀ ಎಚ್. ಎನ್. ನಂಜೇಗೌಡ.—ನದನ್ಯರು ಹೇಳಿರುವ ಮಾತುಗಳ ಬಗ್ಗೆ ಅಧ್ಯಕ್ಷರು ಒಂದು ತೀರ್ಮಾನ ಕೊಡಬೇಕಾಗಿದೆ. ನಾವು ಹಿಂದೆ ಮಾತನಾಡಿದ್ದನ್ನು ಅಷ್ಟು ಸುಲಭರೂಪದಲ್ಲಿ ಎಕ್ಸ್‌ಪಂಜ್ ಮಾಡಿ ಎಂಬುದಾಗಿ ನಿಮ್ಮ ಹುಕುಂ ಬಂದರೆ ಬಹಳ ಕಷ್ಟವಾಗುತ್ತದೆ. ನಾನು ಇಂಗ್ಲಿಷ್ ಗ್ರಾಜುರ್ ಪ್ರೊಫೆಸರ್ ಅಲ್ಲ. ಸರ್ಕಾರದ ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಟ್ಸ್ ಅಂಡ್ ರೀಜನ್ಸ್‌ನಲ್ಲಿ ಹೈಕೋರ್ಟ್ ಬಗ್ಗೆ ಅನುಮಾನಪಡತಕ್ಕ ರೀತಿ ಮೆನ್‌ಷನ್ ಮಾಡಿದ್ದಾರೆ. ಹೈಕೋರ್ಟ್ ಜಡ್ಜ್‌ಮೆಂಟಿನಲ್ಲಿ ಏನಾದರೂ ಅಬ್ಸರ್‌ವೇಷನ್ ಮಾಡಿದ್ದರೆ, ಅದೂ ಕೂಡ ವರದಿಯಾಗುತ್ತದೆ. ಅದೂ ಒಂದು ಹೈಕೋರ್ಟ್ ಸಜೆಷನ್ ಆಗುತ್ತದೆ. ಇವರು ಏನೋ ಪತ್ರವ್ಯವಹಾರ ನಡೆಸಿದ್ದಾರೆಂದು ಹೇಳಿರುವುದರಿಂದ ಹೈಕೋರ್ಟ್ ಬಗ್ಗೆ ಅನುಮಾನ ಬರುವ ರೀತಿಯಲ್ಲಿ ಸರ್ಕಾರ ಮಾಡುತ್ತಿದೆಯೆಂದು ಹೇಳುವುದಕ್ಕಾಗುತ್ತದೆ. ಸರ್ಕಾರದ ಹೇಳಿಕೆ ನ್ಯಾಯಾಂಗ ವಿಚಾರದಲ್ಲಿ ಅನುಮಾನಪಡುವುದಕ್ಕೆ ಅವಕಾಶವಾಗಿದೆಯೆಂಬ ಮಾತನ್ನು ಹೇಳಿದೆ. ಆದ್ದರಿಂದ ನದಾ ಕಾಲವೂ ಎಕ್ಸ್‌ಪಂಜ್ ಮಾಡುವ ನಿಮ್ಮ ಮಾತು ಸರಿಯಾಗಿರುತ್ತದೆಯೇ ?

ಉಪಾಧ್ಯಕ್ಷರು.—ಪ್ರೊಸೀಡಿಂಗ್ಸ್ ಕಾಪಿಯನ್ನು ತಮಗೆ ಕಳುಹಿಸುತ್ತೇನೆ. ಅದನ್ನು ನೋಡಿ.

Sri M. S. KRISHNAN.—On a point of order. Sir, from what I have observed from the beginning, I feel the members on this side have taken basic objection to the introduction of the Bill itself.

Mr. DEPUTY SPEAKER.—Nobody objected to the introduction of the Bill. It was introduced long back.

Sri M. S. KRISHNAN.—We, as members have a right to speak on the merits of the clauses in the Bill. If you are satisfied that there would be other opportunity to discuss that aspect of it, then you are

(SRI M. S. KRISHNAN)

well within your rights to put it to vote. We have not at all discussed the merits. We have talked only on the introduction of the Bill, upon which, of course, some decision is taken. You have given a ruling and I am not going into its merit as to whether it is proper or not. The position is, is it in accordance with the rules of procedure, to speak. I have a right to speak on the merits of the bill and you have not given the opportunity to speak on the merits of the Bill. Without giving an opportunity to members, you are putting it to the vote. That is violation of the rule itself. If such an approach is taken in regard to a Bill, how can we carry on with legislative work? With due respect I wish to submit that the attitude taken must be rectified and we may be permitted to speak on the merits. Then only you can go to second reading.

Mr. DEPUTY SPEAKER.—The Hon. Member was not here. It was fully discussed. Many members spoke on the Bill. No member was prevented from sending his amendments. I have strictly followed the rules and the Bill is passed. I have called the next Bill.

Sri M. N. RAMANNA (Turuvekere).—When the Chair has stated that the Bill is passed, where is the scope for the discussion on that Bill ?

Mysore Court Fees and Suits Valuation (Amendment) Bill, 1968.

Motion to consider.

Sri K. PUTTASWAMY.—I beg to move :

" That the Mysore Court Fees and Suits Valuation (Amendment) Bill, 1968, be taken into consideration."

Mr. DEPUTY SPEAKER.—Motion moved :

" That the Mysore Court Fees and Suits Valuation (Amendment) Bill, 1968, be taken into consideration."

Sri K. PUTTASWAMY.—Sir, This is a very simple amendment.

According to Section 48 of the Mysore Court Fees and Suits Valuation Acts, 1958, the fee payable on a memorandum of appeal against an order relating to compensation under any Act for the time being in force for the acquisition of property for public purpose, is computed on the difference between the amount awarded and the amount claimed by the appellant. But in the case of Narasiyappa and 26 others *Vs.* Central overnment and others, the question of Court-fee payable on appeal under Section 11 of the Requisition and Acquisition of Immovable Property Act, 1952 came up before the High Court for